
₹ 5/-

# ನೇಸರು ತಿಂಗಳೋಲೆ

PAGES 20

AUGUST 2026 | Nesaru Tingalole | Vol. XLIV - 08




## ಮೈಸೂರು ಅಸೋಸಿಯೇಷನ್ ಮುಂಬೈ


## THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಶ್ರೀ ಸ್ವರ್ಣ ಗೌರಿ ಹಾಗೂ ಶ್ರೀ ಮಹಾಗಣಪತಿ ಮಹೋತ್ಸವ





"ಸ್ವಸ್ತಿ ಶ್ರೀ ಶಾಲಿವಾಹನ ಶಕೆ 1948ರ ಶ್ರೀ ಶ್ರೀ ಪರಾಭವ ನಾಮ ಸಂವತ್ಸರ ಭಾದ್ರಪದ ಶುದ್ಧ ತೃತೀಯ ಸೋಮವಾರ **14–09–2026,** ಬೆಳಿಗ್ಗೆ 7 ಘಂಟೆಗೆ **ಶ್ರೀ ಸ್ವರ್ಣ ಗೌರಿ ಪೂಜೆ** ಮತ್ತು **ಚತುರ್ಥಿ** ಸೋಮವಾರ **14–09–2026,** ಬೆಳಿಗ್ಗೆ 10.30 ಘಂಟೆಗೆ ಶ್ರೀ ಮಹಾಗಣಪತಿಯನ್ನೂ ಆವಾಹಿಸಿ, ನವಮಿ ಭಾನುವಾರ 20.09.2026ರ ವರೆಗೆ ಉತ್ಸವವನ್ನು ಅಸೋಸಿಯೇಶನ್ನಿನ ಆಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

ದಿನಾಂಕ **20–09–2026**ನೇ ಭಾನುವಾರ ಬೆಳಿಗ್ಗೆ 10.00 ರಿಂದ ಸಕಲ ಪೂಜಾದಿ ಸೇವೆಗಳನ್ನು ಸಲ್ಲಿಸಿ, ಮಹಾ ಮಂಗಳಾರತಿ ಮಾಡಿ ನಂತರ ಗೌರಿ ಗಣಪತಿಯನ್ನು ವಿಸರ್ಜಿಸಲಾಗುವುದು. ತಾವುಗಳೆಲ್ಲರೂ ಈ ಮಹೋತ್ಸವದಲ್ಲಿ ಭಾಗವಹಿಸಿ, ಉದಾರ ಸಹಾಯ ಮಾಡಿ ಭಗವತ್ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಸೇವಾರ್ಥ ಕೊಡಲಿಚ್ಛಿಸುವವರು ತಮ್ಮ ಹೆಸರು, ಜನ್ಮ ನಕ್ಷತ್ರ, ಗೋತ್ರ, ಪೂಜೆ ನೆರವೇರಿಸಬೇಕಾದ ದಿನಾಂಕ ಬರೆದು ನಮ್ಮ ವಿಳಾಸಕ್ಕೆ ತಲುಪಿಸಿರಿ ಅಥವಾ email ಮಾಡಿ.

**ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು**

**ವಿಶೇಷ ಸೂಚನೆ :** ಸೇವಾರ್ಥ ನಡೆಸಲಿಚ್ಛಿಸುವವರು **ರೂ. 251/–**ಗಳ ಅಥವಾ ಹೆಚ್ಚಿನ ಕಾಣಿಕೆಯನ್ನು (ನಗದು/ಚೆಕ್) ಅಂಚೆ ಮೂಲಕ ಕಳುಹಿಸಬಹುದು ಅಥವಾ ಸ್ವತಃ ಅಸೋಸಿಯೇಶನ್ನಿನ ಕಛೇರಿಗೆ ಬಂದು ನೀಡಬಹುದು.

ಗೌರಿ ಪೂಜೆಯಲ್ಲಿ ಭಾಗವಹಿಸಲು ಬಯಸುವ ಮಹಿಳೆಯರು ತಮ್ಮ ಹೆಸರನ್ನು ದಿನಾಂಕ 10–09–2026ರೊಳಗೆ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಕೋರಿಕೆ.

ಪೂಜೆ ಕಾರ್ಯಕ್ರಮದ ಅಂಗವಾಗಿ ನಡೆಸುವ ಪ್ರತಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಿಚ್ಛಿಸುವ ಸದಸ್ಯರು ರೂ. 3000/– ವನ್ನು ದೇಣಿಗೆಯಾಗಿ ಕೊಡಬೇಕೆಂದು ವಿನಂತಿ.

**ದಿನಾಂಕ 02–08–2026ರಂದು ಅಸೋಸಿಯೇಷನ್‌ನಲ್ಲಿ ಸಂಕಷ್ಟಿ ಪೂಜೆಯನ್ನು ಶ್ರೀಮತಿ ಶ್ಯಾಮಲಾ ಹಾಗೂ ಶ್ರೀರಾಧೇಶ್ ಇವರು ನಡೆಸಿಕೊಟ್ಟರು.**







ಗೌ. ಸಂಪಾದಕರು
**ಡಾ. ಜ್ಯೋತಿ ಸತೀಶ್**

❖ ❖ ❖

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ಕೆ. ಕಮಲ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.

❖ ❖ ❖

ಸಂಪರ್ಕ ವಿಳಾಸ:
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವುದಾಜಿ ರಸ್ತೆ, ಮಾಟುಂಗ,
ಮುಂಬಯಿ–400 019.
✆ 2403 7065

Email:
mysoreassociation.mumbai@gmail.com
Website:
www.mysoreassociation.in

**'ನೇಸರು' ತಿಂಗಳೋಲೆ**

**ಸಂಪುಟ 44** | **ಆಗಸ್ಟ್ 2026** | **ಸಂಚಿಕೆ 07**

# 'ರಿಯರ್ ಹೀರೋ'



**ಡಾ. ಜ್ಯೋತಿ ಸತೀಶ್**

ನಮ್ಮ ಪ್ರತಿಯೊಬ್ಬರ ಬದುಕಿನಲ್ಲಿ ರಿಯರ್ ಹೀರೋ ಇದ್ದೇ ಇರುತ್ತಾರೆ. ನಿಮ್ಮ ಬದುಕಿನಲ್ಲಿ ನಿಮ್ಮ ನಿಜವಾದ ಹೀರೋ ಯಾರು ಎಂದು ಪ್ರಶ್ನಿಸಿದಾಗ, ಸಹಜವಾಗಿಯೇ ಎಲ್ಲರ ಮನದಲ್ಲಿ ಮೂಡುವುದು ಅವರವರ ತಂದೆಯ ಮುಖ. ಇನ್ನು ಹೆಣ್ಣುಮಕ್ಕಳಿಗಂತೂ ತಾಯಿಗಿಂತಲೂ ತಂದೆಯಂದ್ರೆ ಪ್ರಾಣ. ತಾಯಿ ಎಷ್ಟೇ ಮುದ್ದುಗೆರೆದರೂ, ತಂದೆಗೆ ಇರುವ ಸ್ಥಾನವೇ ಬೇರೆ. ತಪ್ಪು ಮಾಡಿ ಸಿಕ್ಕಿ ಬಿದ್ದಾಗ, ತಾಯಿ ಎಷ್ಟೇ ಬೈದರೂ ಅದು ಮನಸ್ಸಿನ ಒಳಗೆ ಹೊಗ್ಗುವುದಿಲ್ಲ. ಅದೇ ತಂದೆಯ ಕೋಪವನ್ನು ಹೊತ್ತ ಆ ಭಾವಪೂರ್ಣ ಕಣ್ಣುಗಳೆರಡನ್ನು ನೋಡಿದರೆ ಸಾಕು, ಮನಸ್ಸಿಗೆ ಅದೆಷ್ಟು ನೋವಾಗುತ್ತದೆ! ತಾಯಿಯಂದಿರು ಹೆಚ್ಚಾಗಿ ತಮ್ಮ ಮನಸ್ಸಿನ ಭಾವನೆಗಳನ್ನು ಮಕ್ಕಳ ಮುಂದೆ ಅಭಿವ್ಯಕ್ತಿಸುತ್ತಾರೆ. ಆದರೆ ತಂದೆಯಂದಿರು ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸುವುದಿಲ್ಲ. ಅವರಿಗೆ ಪ್ರೀತಿ ಇಲ್ಲ ಅಂತಲ್ಲ. ಮಕ್ಕಳ ಮೇಲೆ ಪ್ರೀತಿ ಬೆಟ್ಟದಷ್ಟಿರುತ್ತದೆ. ಆದರೆ ತೋರಿಸಿಕೊಳ್ಳುವುದಿಲ್ಲ. ಮನದ ಮೂಲೆಯಲ್ಲಿ ಸ್ಥಿರವಾಗಿರುತ್ತದೆ. ತಾನು ಕಷ್ಟದಲ್ಲಿ ಬೆಂದರೂ ಪರವಾಗಿಲ್ಲ. ಆದರೆ ತನ್ನ ಮಕ್ಕಳು ಕಷ್ಟಪಡಬಾರದೆಂದ ಅದಮ್ಯ ಅಭಿಲಾಷೆಯನ್ನು ಹೊತ್ತಿರುತ್ತಾರೆ. ಮಕ್ಕಳಿಗಾಗಿ ತಮ್ಮೆಲ್ಲ ಆಸೆ–ಆಕಾಂಕ್ಷೆಗಳನ್ನು ತ್ಯಾಗ ಮಾಡಿರುತ್ತಾರೆ. ಆಕಾಶದಲ್ಲಿ ಸೂರ್ಯ ಹೇಗೋ, ಮನೆಯಲ್ಲಿ ತಂದೆ ಹಾಗೆ. ಬೆಳಕು ಕೊಡಲು ತಾನೇ ಸುಟ್ಟುಕೊಳ್ಳುವವನು. ಜಗತ್ತಿಗೆ ತೋರಿಸಿಕೊಳ್ಳದ ಹೀರೋ.

ಚಿಕ್ಕಂದಿನಲ್ಲಿ ನಮ್ಮ ಪ್ರತಿ ಚಟುವಟಿಕೆಯಲ್ಲಿ ತಂದೆ ತಾಯಿಯಂದಿರು ಭಾಗವಹಿಸುತ್ತಾರೆ. ಅದು ಶಾಲೆಯ ಪ್ರವೇಶಾತಿ ಇರಬಹುದು ಅಥವಾ ನಾವು ಪಾಲ್ಗೊಳ್ಳುವ ಯಾವುದೇ ಕಾರ್ಯಕ್ರಮವಿರಬಹುದು. ತಂದೆ–ತಾಯಿಯರಲ್ಲಿ ಯಾರಾದರೂ ಒಬ್ಬರು ಜೊತೆಗೆ ಬಂದೇ ಬರುತ್ತಾರೆ. ಮಕ್ಕಳು ಎಷ್ಟೇ ದೊಡ್ಡವರಾದರೂ ಪೋಷಕರಿಗೆ ಅವರು ಇನ್ನೂ ಚಿಕ್ಕ ಮಕ್ಕಳೇ. ಮೊದಲ ಹೆಜ್ಜೆವೂರುವಾಗ ಕೈಬೆರಳನ್ನು ಹಿಡಿದು ನಡೆಸಿದಾತ, ಜೀವನದ ಕೊನೆಯವರೆಗೂ ಜೊತೆಗಿರಲು ಬಯಸುತ್ತಾನೆ. ನಾವು ಜೀವನದಲ್ಲಿ ಯಶಸ್ಸನ್ನು ಪಡೆದಾಗ, ಮೊದಲು ಖುಷಿಪಡುವವರು ನಮ್ಮ ತಂದೆ ತಾಯಿಯಂದಿರು. ಮೊನ್ನೆ ಮೊನ್ನೆಯಷ್ಟೇ ನನ್ನ ಹೆಗಲ ಮೇಲೆ ಕುಳಿತು ಆಟವಾಡುತ್ತಿದ್ದವ, ಇಂದು ಇಷ್ಟು ಬೇಗ ಎಷ್ಟು ಎತ್ತರಕ್ಕೆ ಬೆಳೆದಿದ್ದಾನೆ ಎಂದು ಅಭಿಮಾನಪಡುತ್ತಾರೆ.

ಆದರೆ ಇವತ್ತಿನ ಯುವಜನಾಂಗಕ್ಕೆ ಈ ಭಾವನೆಗಳಿಗೆ ಬೆಲೆ ಇಲ್ಲ. ಈಗ ಅವರು ತಂದೆ ತಾಯಿಯರ ಜೊತೆ ಹೋದರೆ, ನಾನು ನಗೆಪಾಟಲಿಗೆ ಈಡಾಗುತ್ತೇನೆಂಬ ಭಯ. 'ನಾನೇನು ಹಾಲು ಕುಡಿಯುವ ಮಗು ಅಲ್ಲ, ನೀವು ನನ್ನ ಜೊತೆ ಬರಬೇಡಿ' ಎಂದು ಮುಖಕ್ಕೆ ಹೊಡೆದ ಹಾಗೆ ಹೇಳಿ ಬಿಡುತ್ತಾರೆ. ಆದರೆ ಜೀವನದಲ್ಲಿ ಒಂದು ಸಮಯ ಬಂದೇ ಬರುತ್ತೆ. ಜೀವನದಲ್ಲಿ ತಂದೆ ತಾಯಿಯ ಪ್ರಾಮುಖ್ಯತೆ ಏನು ಅನ್ನೋದನ್ನು ಕಾಲವೇ ತಿಳಿಸಿಕೊಡುತ್ತದೆ. ಇರುವಾಗ ಬೇಡ ಎಂದು ದೂರತಳ್ಳುತ್ತೇವೆ, ಬೇಕಾದಾಗ ಅವರು ನಮ್ಮ ಕಣ್ಣೆದುರು ಇರುವುದಿಲ್ಲ. ನಮ್ಮಲ್ಲಿ ಒಂದು ಗಾದೆ ಇದೆ. 'ಹಲ್ಲಿರುವಾಗ ಕಡಲೆ ಇಲ್ಲ. ಕಡಲೆ ಇರುವಾಗ ಹಲ್ಲಿಲ್ಲ' ಅಂತ. ಇದೇ ಜೀವನದ ವಿಪರ್ಯಾಸ.

ಸಂಬಂಧಗಳಿಗೆ ಬೆಲೆಕೊಡುವ ತಿಳಿವಳಿಕೆ ಇವತ್ತಿನ ಯುವಜನಾಂಗಕ್ಕೆ ಇರಬೇಕು. ಹಿಂದೆ ಒಂದು ಕಾಲವಿತ್ತು. ಮಕ್ಕಳಿಗೆ ಗುರುಗಳಲ್ಲಿ ಮತ್ತು ತಂದೆತಾಯಿಯರಲ್ಲಿ ತುಂಬಾ ಭಯ ಭಕ್ತಿ ಹಾಗೆ ಗೌರವವಿದ್ದಿತ್ತು. ಆದರೆ ಈಗಿನ ಮಕ್ಕಳಲಲ್ಲಿ ಇದನ್ನೆಲ್ಲ ಕಾಣುತ್ತಿಲ್ಲ. ಎಲ್ಲರಲ್ಲೂ ಉದ್ಧಟತನದಿಂದ ವರ್ತಿಸುವುದನ್ನು ನೋಡಿದರೆ ಮುಂದೆ ಇವರ ಭವಿಷ್ಯ ಹೇಗಪ್ಪ ಎಂಬ ಕಳವಳ ಮನಸ್ಸಿನಲ್ಲಿ ಹುಟ್ಟದಿರದು. 'ವಿದ್ಯಾ ವಿನಯೇನ ಶೋಭತೇ' ಎಂದು ಹೇಳುತ್ತಾರೆ. ವಿದ್ಯೆ ಎಷ್ಟು ಇದ್ದರೂ, ಪದವಿ ಎಷ್ಟೇ ಇದ್ದರೂ ಅದರ ಜೊತೆ ವಿನಯ ಇಲ್ಲದಿದ್ದರೆ ಆ ವಿದ್ಯೆಗೆ ಬೆಲೆ ಇಲ್ಲ.

ಇವತ್ತಿನ ಶಿಕ್ಷಣ ವ್ಯವಸ್ಥೆ ವ್ಯವಹಾರಿಕವಾಗಿ ಪರಿವರ್ತನೆಯಾಗಿವೆ. ಎಲ್ಲರ ಚಿತ್ತ ಅಲ್ಪದರಲ್ಲಿ ಹೆಚ್ಚು ಹಣವನ್ನು ಹೇಗೆ ಗಳಿಸಬಹುದುರತ್ತ. ಜಾಬ್ ಓರಿಯಂಟೆಡ್ ಆಗಿ ಎಲ್ಲ ಬದಲಾಗಿದೆ. ಶಿಕ್ಷಣ ವ್ಯವಸ್ಥೆ, ಸಮಾಜದಲ್ಲಿ ಒಂದು ಉತ್ತಮ ನಾಗರಿಕನಾಗಿ ಹೇಗೆ ಬದುಕಬೇಕು ಎನ್ನುವುದರತ್ತ ಗಮನಹರಿಸಬೇಕು.

ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು. ಹಿಂದೆಲ್ಲ ಅವಿಭಕ್ತ ಕುಟುಂಬ ವ್ಯವಸ್ಥೆ ಇದ್ದಿತು. ಆಗ ಮಕ್ಕಳಲ್ಲಿ ಹಿರಿಯರಿಗೆ ಗೌರವ ಕೊಡುವುದು, ಎಲ್ಲವನ್ನೂ ಹಂಚಿ ತಿನ್ನಬೇಕು ಎಂಬ ಗುಣ ತನ್ನಿಂದ ತಾನೇ ಬರುತ್ತಿತ್ತು. ಈಗೆಲ್ಲ ವಿಭಕ್ತ ಕುಟುಂಬವೇ ಎಲ್ಲ ಕಡೆ ಕಾಣ ಸಿಗುವುದರಿಂದ, ಮಕ್ಕಳಿಗೆ ಇದನ್ನೆಲ್ಲ ಹೇಳಿಕೊಡಬೇಕಾಗುತ್ತದೆ. ಮಕ್ಕಳು ಹಿರಿಯರು ಏನು ಮಾಡುತ್ತಾರೆ ಎನ್ನುವುದನ್ನು ಬಹಳ ಬೇಗ ನೋಡಿ ಕಲಿಯುವುತ್ತಾರೆ. ಅದಕ್ಕೆ ಮಕ್ಕಳ ಮುಂದೆ ನಿಮ್ಮ ಮುಂದೆ ನಡೆದುಕೊಳ್ಳುವ ರೀತಿಯ ಬಗ್ಗೆ ಬಹಳ ಜಾಗರೂಕತೆ ವಹಿಸಿಬೇಕಾಗುತ್ತದೆ. ಮಕ್ಕಳ ಮನಸ್ಸು ಹಸಿಮಣ್ಣಿನ ಹಾಗೆ. ಹಸಿ ಇರುವಾಗ ನೀವು ಯಾವ ರೂಪ ಕೊಟ್ಟರೂ ಅದಕ್ಕೆ ಹೊಂದಿಕೊಳ್ಳುತ್ತದೆ. *(ಪುಟ 10ಕ್ಕೆ...)*

# ‘ಅಯೋಧ್ಯಾ, ಕಾಶಿ’ – ಪ್ರವಾಸ ವೈವಿಧ್ಯ



✍ ಡಾ. ಸುಮಾ ದ್ವಾರಕಾನಾಥ್

ನೇಸರುವಿನ ಕೃಪೆಯೋ ಏನೋ. ತಿಂಗಳಿಗೊಂದು ಪ್ರವಾಸ ಒದಗುತ್ತಾ ಇದೆ. ಅದರ ಅನುಭವ ಹಂಚಿಕೊಂಡರೆ ಓದುಗರಿಗೆ ಬೇಸರವಿಲ್ಲ ತಾನೇ?

ಅಯೋಧ್ಯೆ ಮತ್ತು ವಾರಣಾಸಿ ಕಾರಿಡಾರ್ ಆದಾಗಿನಿಂದ ಇವೆರಡೂ ಕ್ಷೇತ್ರಗಳಿಗೆ ಹಂಬಲಿಸುತ್ತಿದ್ದೆ. ಆದರೆ ಯಾರೂ ನನ್ನನ್ನು ಕರೆದುಕೊಂಡು ಹೋಗಲು ತಯಾರಿರಲಿಲ್ಲ. ಹಿಂದೆ ನಾಲ್ಕೈದು ಬಾರಿ ಕಾಶಿಗೆ ಹೋಗಿದ್ದರೂ ಸಣ್ಣದೊಂದು ಆಸೆ ಕೊರೆಯುತ್ತಲೇ ಇತ್ತು.

ಎರಡು ತಿಂಗಳ ಹಿಂದೆ ಅದಕ್ಕೆ ಕಾಲ ಕೂಡಿ ಬಂತು. ಪಲಾವದ ಗೆಳತಿಯರು 4 ಜನ ಹೊರೆಟೆವು. ಒಬ್ಬಳು ಬ್ಯಾಂಕ್ ರಿಟೈರ್ ಅಧಿಕಾರಿಯಾದ್ರಿಂದ ಗೆಸ್ಟ್ ಹೌಸ್‌ಗಳನ್ನು ಬುಕ್ ಮಾಡಿದಳು. ಲಕ್ನೊ, ನೈಮಿಶಾರಣ್ಯ, ಅಯೋಧ್ಯೆ, ಪ್ರಯಾಗ ಮತ್ತು ಕಾಶಿಗೆ ಪ್ಲಾನ್ ಮಾಡಿದೆವು.

ವಿಮಾನದ ಟಿಕೆಟ್‌ಗಳನ್ನು ಅವರವರೇ discount rate ನಲ್ಲಿ ಕೊಂಡೆವು. ಇನ್ನೊಬ್ಬ ಗೆಳತಿಯ ಮಗಳು airport too & fro transport ಗೆ sponsor ಮಾಡಿದಳು. ನಮ್ಮ ಯಾತ್ರೆ ಹೀಗೆ ಶುರುವಾಯಿತು.

ಬೆಳಗ್ಗೆ ಹೊರಟು, 11 ಗಂಟೆಗೆ ಲಕ್ನೊ ತಲುಪಿದೆವು. ಅಲ್ಲಿ ನಮಗಾಗಿ ಜಾವೇದ್ ಖಾನನ ಗಾಡಿ ಕಾದಿತ್ತು. ಸುಸಜ್ಜಿತ SBI guest house ನಲ್ಲಿ ತಿಂಡಿ, ಊಟ ಮುಗಿಸಿ ಸಂಜೆ ಊರು ಸುತ್ತಲು ಹೊರೆಟೆವು. ಮೂಲತಃ ಇತಿಹಾಸದ ಪ್ರಕಾರ ಶ್ರೀರಾಮ ತಮ್ಮ ಲಕ್ಷ್ಮಣನಿಗೆ ಈ ಜಾಗವನ್ನು ಉಡುಗೊರೆಯಾಗಿ ಕೊಟ್ಟಿದ್ದರಿಂದ ಇದಕ್ಕೆ ಲಕ್ಷ್ಮಣಪುರ ಎಂಬ ಹೆಸರಾಯಿತು. ಅದು ಕ್ರಮೇಣ ಮೊಘಲರ ಮತ್ತು ಬ್ರಿಟಿಷರ ಕಾಲದಿಂದ ಅಪಭ್ರಂಶಗೊಂಡು ಲಕ್ನೋ ಆಗಿದೆ. ಡ್ರೈವರ್ ಅಲ್ಲಿಯ ಸಣ್ಣ ಪುಟ್ಟ ಮಂದಿರಗಳಿಗೆಲ್ಲಾ ನಮ್ಮನ್ನು ಸುತ್ತಿಸಲು ನೋಡಿದ. ನನಗೆ ಕೋಲಿನೊಂದಿಗೆ ಹತ್ತಿ ಇಳಿಯುವುದು ಕಷ್ಟವಾಯಿತು. ನನ್ನ ಗೆಳತಿಯರಿಗೋ ಶಾಪಿಂಗ್ ಹುಚ್ಚು. ಅವನು ಕರೆದುಕೊಂಡು ಹೋದ ಮಾರ್ಕೆಟ್ ಗಳು ಅವರಿಗೆ ಸಮಾಧಾನ ತರಲಿಲ್ಲ.



ಮಾರನೆದಿನ ಬೆಳಗ್ಗೆ ಅಲ್ಲಿಯ ಮುಖ್ಯಮಂದಿರವೆಂದು ಚಂದ್ರಿಕಾ ಮಂದಿರಕ್ಕೆ ಹೊರೆಟೆವು. ಅದು ಊರ ಹೊರಗಡೆ ಸೀತಾಪುರಕ್ಕೆ ಹೋಗುವ ರಸ್ತೆಯಲ್ಲಿದೆ. ಗೋಮತಿ ನದಿಯ ದಂಡೆಯ ಮೇಲೆ ಸ್ಥಾಪಿಸಿರುವ 300 ವರ್ಷ ಹಳೆಯ ದುರ್ಗಾ ಮಂದಿರ ವಿಶಾಲವಾಗಿ ಮತ್ತು ಸ್ವಚ್ಛವಾಗಿದೆ. ದೇವಿಯು ಮೂರ್ತಿಯ ರೂಪದಲ್ಲಿಲ್ಲದೆ ಮೂರು ಬಂಡೆಯಾಕಾರದಲ್ಲಿದೆ ನಮ್ಮ ದಕ್ಷಿಣ ದೇಶದವರಿಗೆ ಮೂರ್ತಿ, ಅಲಂಕಾರ ನೋಡಿ ಅಭ್ಯಾಸವಾದುದರಿಂದ ನನಗೆ ಭಕ್ತಿ ಮೂಡಲು ಕಷ್ಟವಾಯಿತು.

ಅಲ್ಲಿಂದ ವಾಪಸ್ಸು ಬರುವ ದಾರಿಯಲ್ಲೇ ನನ್ನ ಗೆಳತಿಗೆ ಇನ್ನೊಂದು ಶಕ್ತಿಪೀಠ ಇರುವ ನೆನಪು ಬಂತು. ಭಕ್ಷಿಯ ಕೊಳದ ಬಳಿ 4 ಅಂತಸ್ತಿನ ಮತ್ತೊಂದು ದೇವಾಲಯ. ನವರಾತ್ರಿ ಬೊಂಬೆಗಳ ತರಹ ಅಲಂಕರಿಸಿ ದೇವಿಯ ವಿವಿಧ ರೂಪಗಳನ್ನು ಪ್ರದರ್ಶನಕ್ಕಿಟ್ಟಿದೆ. ಉತ್ತರ ಪ್ರದೇಶದ ಬಿಸಿಲು ಆಗಲೇ ನಮ್ಮನ್ನು ತಟ್ಟಿತ್ತು. ಆಯಾಸಗೊಂಡು ಗೆಸ್ಟ್ ಹೌಸ್ ತಲುಪಿ ಊಟ ಮಾಡಿ ಮಲಗಿದೆವು. ಸಂಜೆ ಅಲ್ಲೇ ಸೆಟ್ಲ್ ಆಗಿದ್ದ ಗೆಳತಿಯ ಮನೆಗೆ ಹೋಗಿ ಆತಿಥ್ಯ ಪಡೆದು ಅವರು ಕರೆದುಕೊಂಡು ಹೋದ ಅಂಗಡಿಯಲ್ಲೇ ಸಾಕಷ್ಟು ಚಿಕನ್ಕಾರಿ ಸೀರೆಗಳನ್ನು ಖರೀದಿಸಿ ವಾಪಸ್ಸು ಬಂದೆವು.

ಮಾರನೆಯ ಬೆಳಗ್ಗೆ 80 ಕಿ.ಮೀ. ದೂರವಿರುವ ನೈಮಿಶಾರಣ್ಯಕ್ಕೆ ಹೊರಟೆವು. ಎಲ್ಲರ ಬಾಯಲ್ಲೂ ಅದರ ಹೆಸರು ಕೇಳಿ ಕೇಳಿ ನೋಡುವ ಕುತೂಹಲವಿತ್ತು. ಹೆಸರೇ ಹೇಳುವ ಹಾಗೆ ಅರಣ್ಯದ ಭ್ರಮೆಯಲ್ಲಿದ್ದೆ. ಆದರೆ ತಲುಪಿದಾಗ ಅಲ್ಲಿಯ ಪರಿಸ್ಥಿತಿ ಭಕ್ತರನ್ನು ಕಾಡುವ ಪಂಡಾಗಳ ಊರಾಗಿ ಪರಿವರ್ತನೆ ಗೊಂಡಿರುವುದನ್ನು ನೋಡಿ ಮನಸ್ಸಿಗೆ ಬೇಸರವಾಯ್ತು.

ವಾಸ್ತವದಲ್ಲಿ ಇದು ರಾಮಾಯಣ, ಮಹಾಭಾರತ ಕಾಲದಿಂದ ಅನೇಕ ಪೌರಾಣಿಕ ಹಿನ್ನೆಲೆ ಹೊಂದಿರುವ ಪವಿತ್ರ ಸ್ಥಳ. ನೀಮ್ ಸಾರ್ ಅಥವಾ ನಿಮ್ಸಾ ಎಂದೂ ಹೆಸರಿದೆ.

ಶ್ರೀರಾಮ ಇಲ್ಲಿ ಅಶ್ವಮೇಧಯಾಗ ಮಾಡಿದಾಗ ವಾಲ್ಮೀಕಿ ಮುನಿಗಳು ಲವ ಕುಶರನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದರೆಂದು ಸ್ಥಳ ಪುರಾಣ ಹೇಳುತ್ತದೆ.

ಇನ್ನೊಂದು ಕಥೆ, ಮುನಿಗಳೆಲ್ಲರೂ ಸೇರಿ ಪರಬ್ರಹ್ಮನನ್ನು ತಮ್ಮ ತಪಸ್ಸಿಗಾಗಿ ಪವಿತ್ರ ಸ್ಥಳ ಕೇಳಿದಾಗ ಅವನು ಬಿಟ್ಟ ಚಕ್ರ ಇಲ್ಲಿ ಬಿದ್ದಿದ್ದರಿಂದ, ‘ಚಕ್ರತೀರ್ಥ’ ಭಕ್ತರ ಪಾಪಗಳನ್ನು ತೊಳೆಯುವ ಕ್ಷೇತ್ರವಾಗಿದೆ.

ವೇದ ವ್ಯಾಸರು ಮಹಾಭಾರತವನ್ನು ರಚಿಸಿದ ಸ್ಥಳವೂ ಇಲ್ಲಿಯೇ ಇದೆ. (ವ್ಯಾಸಗದ್ದಿ)

ವೇದವ್ಯಾಸರ ಮಹಾಕಾವ್ಯವನ್ನು ಉಗ್ರಶ್ರವ ಮುನಿಗಳು 88,000 ಋಷಿಗಳಿಗೆ ಸುಮಾರು 12 ವರ್ಷ ಪಠಣ ಮಾಡಿದ್ದಾರೆಂಬ ಪ್ರತೀತಿಯೂ ಇದೆ. ಮುಖ್ಯವಾಗಿ ಇಲ್ಲಿನ ದೇವತೆ ಲಲಿತಾ ದೇವಿ. 51 ಶಕ್ತಿಪೀಠಗಳಲ್ಲಿ ಒಂದಾದ ಸತಿಯ ಎಡ ಭುಜ ಬಿದ್ದ ಸ್ಥಳವಾಗಿದೆ.

ಸತ್ಯನಾರಾಯಣ ಕಥೆಯನ್ನೂ ಇಲ್ಲೇ ರಚಿಸಲಾಗಿದೆ.

ಊರ ಹೊರಗೆ ದಧೀಚಿ ಮಂದಿರವಿದೆ. ವೃತ್ರಾಸುರನೆಂಬ ರಾಕ್ಷಸನನ್ನು ಕೊಲ್ಲಲು ವಿಷ್ಣು, ಇಂದ್ರನಿಗೆ ದಧೀಚಿಮುನಿಯ ಮೂಳೆಗಳನ್ನು ತರಲು ಹೇಳಿದಾಗ, ಶಾಂತ ಸ್ವಭಾವದ ಮೂರ್ತಿಯಾದ ಮುನಿ ಸಂತೋಷದಿಂದ ಕೊಡಲೊಪ್ಪಿ ಪ್ರಾಣ ತ್ಯಾಗ ಮಾಡುತ್ತಾನೆ. ಅದರಿಂದಲೇ ಇಂದ್ರ ವಜ್ರಾಯುಧವನ್ನು ತಯಾರಿಸಿ ರಾಕ್ಷಸನನ್ನು ವಧಿಸುತ್ತಾನೆ.

ಇಂಥ ಪವಿತ್ರ ಕ್ಷೇತ್ರದಲ್ಲಿ, ಬೇರೆ ಬೇರೆ ರಾಜ್ಯದವರು ತಮ್ಮ ಊರಿನ ಭಕ್ತರಿಗಾಗಿ, ಊಟ, ವಸತಿ, ಪೂಜಾ ಸೌಕರ್ಯವನ್ನು ವೈಭವಯುತವಾಗಿ ಅಲ್ಲಿ ನಿರ್ಮಿಸಿದ್ದಾರೆ. ಮೊದಲೇ ಆನ್ ಲೈನ್ ಬುಕ್ ಮಾಡಿದ್ದರಿಂದ ಸತ್ಯನಾರಾಯಣನ ಪೂಜೆಯನ್ನು ಯಾಂತ್ರಿಕವಾಗಿ ನಮಗೆಲ್ಲಾ ಮಾಡಿಸಿದರು. ಇಷ್ಟು ಪವಿತ್ರ ಭಾವನೆಯಿಂದ ಅಲ್ಲಿ ಹೋದರೆ, ಮಂದಿರದ ಆ ಗೌಜಿನಲ್ಲಿ ಪಂಡಾಗಳು ರಟ್ಟೆ ಹಿಡಿದೆಳೆದು ದುಡ್ಡು ಕಸಿಯುತ್ತಾರೆ. ಸಂಜೆ ಆರತಿಯಲ್ಲಾದರೂ ದೇವಿಯ ದರ್ಶನ ಪಡೆಯೋಣವೆಂದರೆ, ನೀವು ಬೆಳಗ್ಗೆ 200 ರೂ ಮಾತ್ರ ಕೊಟ್ಟಿದ್ರಿ, ಇನ್ನೂ 300 ರೂ ಬಾಕಿ ಎಂದು ಹೇಳಿ ವಸೂಲು ಮಾಡಿದರು. ಮಂದಿರದ ಹೊರ ಪ್ರಾಕಾರದಲ್ಲಿ ಬಲವಂತವಾಗಿ ಒಂದು ತೆಂಗಿನಕಾಯನ್ನು ಕೈಗೆ ತುರುಕಿ ಮಂತ್ರದಿಂದ ನಮ್ಮ ವಂಶೋದ್ಧಾರಮಾಡಿ 500 ರೂಗೆ ಕಮ್ಮಿ ಇಲ್ಲದಂತೆ ವಸೂಲು ಮಾಡುವ ಸಣ್ಣ ಪುಟ್ಟ ಹುಡುಗರೂ ನಮ್ಮನ್ನು ಕಾಡುತ್ತಾರೆ. ಇಂಥ ಪರಿಸರದಲ್ಲಿ ಮನಸ್ಸು ಹೇಗೆ ಶಾಂತವಾಗಲು ಸಾಧ್ಯ? ನೈಮಿಶಾರಣ್ಯದ ಪವಿತ್ರತೆಯನ್ನೇ ಮಲಿನಗೊಳಿಸಿದ ಪರಿಗೆ ಮನಸ್ಸು ನೊಂದಿತು.

ಮುಂದಿನ ಪ್ರಯಾಣ ಅಯೋಧ್ಯೆಗೆ. ಎರಡು ಗಂಟೆ ಪ್ರಯಾಣ ಮಾಡಿ, ಸಂಜೆ ತಲುಪಿದೆವು.



ನನಗೆ ಅಲ್ಲಿಯ ಒಬ್ಬ security ನಂಬರ್ ಸಿಕ್ಕಿದರಿಂದ ಅವರಿಗೆ ಫೋನ್ ಮಾಡಿದೆ. ಬೆಳಗ್ಗೆ ಮುಂಬಾಗಿಲಿನಲ್ಲಿ ಸಿಗೋಣ ಎಂದು ಹೇಳಿದವರು ಪತ್ತೆಯೇ ಇಲ್ಲ. ಯಾಕೆ ಕಾಯುವುದೆಂದು ನಮ್ಮನ್ನು ಸುತ್ತುವರೆದಿದ್ದ ಪೋರ್ಟರ್ ಗಳ ಸಹಾಯವನ್ನೇ ಪಡೆದೆವು. ಹಿರಿಯ ನಾಗರಿಕರಿಗೆ 150 ರೂ ಕೊಟ್ಟರೆ ಆಧಾರ್ ಕಾರ್ಡ್ ನಿಂದ ರಿಜಿಸ್ಟ್ ಮಾಡಿಸಿ ವ್ಹೀಲ್ ಚೇರ್‌ನಲ್ಲಿ ಸೀದಾ ದೇವರ ದರ್ಶನ ಮಾಡಿಸಿ ಕರೆದುಕೊಂಡು ಬಂದು ಬಿಟ್ಟರು. ನಮಗೆ ಆಶ್ಚರ್ಯ, ಇಷ್ಟು ಸುಲಭವಾಗಿ ಆಯಿತೆಲ್ಲಾ ಎಂದು. ಮಂದಿರದ ಪ್ರಾಕಾರದಲ್ಲಿ ಬರುವಾಗ ಒಂದು ದೊಡ್ಡ ಭೋಜನಶಾಲೆ ಕಾಣಿಸಿತು. ವಿಚಾರಿಸಿದಾಗ ಬೆಳಗಿನ ತಿಂಡಿ, ಊಟ ಎರಡು ಹೊತ್ತು ಉಚಿತ ಎಂದರು, ಆಧಾರ್ ಕಾರ್ಡ್ ತೋರಿಸಿ ಒಳ್ಳೆ ತಿಂಡಿ ತಿಂದು ಬಂದೆವು. ಪಾಟ್ನದ ಹನುಮಾನ್ ಮಂದಿರದವರು ಯಾವ ವಂತಿಗೆಯನ್ನೂ ಸ್ವೀಕರಿಸದೆ ಬಂದ ಭಕ್ತರಿಗೆಲ್ಲಾ ಸ್ವಚ್ಛ ಪ್ರಸಾದವನ್ನು ಹಂಚುತ್ತಿದ್ದರು. ಇದ್ದ ಎರಡು ದಿವಸವೂ ನಾವು ನೂಕು ನುಗ್ಗಲಿಲ್ಲದ ದರ್ಶನ ಮತ್ತು ಪ್ರಸಾದ ಸ್ವೀಕರಿಸಿದೆವು. ಸಂಜೆ ಸರಯೂ ಆರತಿಗಾಗಿ ನದಿಯ ದಂಡೆಯ ಮೇಲೆ ಹೋಗಿ ಕೂತೆವು. ಕಾಶಿಯಂತೆಯೇ ಇಲ್ಲಿಯೂ ಆರತಿ ಸಾಂಗವಾಗಿ ನೆರವೇರಿತು. ಮತ್ತೆ ರಿಕ್ಷಾ ಹತ್ತಿ ಹೋಟೆಲ್‌ಗೆ ವಾಪಸ್ಸಾದೆವು. ಬೆಳಗ್ಗೆ 6 ಗಂಟೆಗೆ ನಮಗೆ ಆರತಿಯ ಪಾಸ್ ಸಿಕ್ಕಿದ್ದರಿಂದ ಮತ್ತೆ ಹೊರಟೆವು, ಮತ್ತದೇ ಪ್ರಕಾರ ಸೀದಾ ರಾಮನಲ್ಲಿಗೆ ಕರೆದುಕೊಂಡು ಹೋಗಿ ಅರ್ಧ ಗಂಟೆ ದೇವರ ಮುಂದೆ ನಿಲ್ಲಿಸಿದರು. ತೀರ್ಥ ಪ್ರಸಾದ ಕೊಟ್ಟರು. ಮನಸ್ಸು ತೃಪ್ತಿಯಾಗಿ ಪ್ರಯಾಗ್ ರಾಜ್‌ಗೆ ಹೊರಟೆವು.

ಸಂಗಮದ ಹತ್ತಿರ ಎಂದು ಮಾಡಿದ ವಸತಿ ಕೈಕೊಟ್ಟಿತ್ತು. ಬೇರೆ ಹುಡುಕಿ, ಲಗೇಜ್ ಹಾಕಿ ಸ್ನಾನಕ್ಕೆ ಹೊರಟೆವು. ಅಲ್ಲೂ ಪಂಡಾಗಳ ಕಾಟ. ಬಲವಂತ ಮಾಘಸ್ನಾನ ಮಾಡಿ ಊರ ಹೊರಗಿನ ಹನುಮಾನ್ ಗುಡಿಗೆ ಹೋದೆವು. ನಾನು ಕುಂಭ ಮೇಳಕ್ಕೆ ಹೋದಾಗ ಮೈದಾನ ಪೂರಾ ವಸ್ತು ಪ್ರದರ್ಶನ ನಡೆದಿದ್ದು, ಆಂಜನೇಯನ ಗುಡಿಗೆ ನಡೆದು ಹೋಗಲಾಗಿರಲಿಲ್ಲ. ಈ ಸಲ ಗಾಡಿ ಸೀದಾ ಮಂದಿರದ ಮುಂದೆಯೇ ನಿಂತಿತು. ಹಾಗಾಗಿ ದರ್ಶನ ಸುಲಭವಾಯಿತು.

ಸೌಗಂಧಿಕಾಪಹರಣದ ಪ್ರಯುಕ್ತ ಭೀಮ, ಆಂಜನೇಯನನ್ನು ಭೇಟಿ ಮಾಡಿದ ಪುಣ್ಯ ಸ್ಥಳ ಅದು. ಮನಸ್ಸಿಗೆ ಸಮಾಧಾನವಾಯಿತು.

ನಮ್ಮ ಕಡೆಯ ಗಮ್ಯ ಕಾಶಿ. ಆದರೆ ನನ್ನ ಗೆಳತಿಗೆ ವಿಂಧ್ಯಾಚಲ ನಿವಾಸಿನಿಯನ್ನು ನೋಡುವ ಆತುರ. ಹಾಗಾಗಿ ನಡುವೆ ನಮ್ಮ ಪ್ರಯಾಣ ಸ್ವಲ್ಪ ಬದಲಾಯಿತು.

ಅಷ್ಟಭುಜಾದೇವಿ, ವಿಂಧ್ಯವಾಸಿನಿ ಮತ್ತು ಕಾಳಿದೇವಿ ಎಂಬ ರೂಪಗಳಿಂದ ಪ್ರಕಟಗೊಂಡಿರುವ ತ್ರಿದೇವಿ ಶಕ್ತಿಪೀಠ. ಇಲ್ಲಿ ದೇವಿಯ ಎಡ ಹೆಬ್ಬೆರಳು ಬಿದ್ದಿರುವ ಸ್ಥಳವೆಂದು ಪ್ರತೀತಿ. ಈ ಸಿದ್ಧಪೀಠವು ಗಂಗಾನದಿಯ ದಂಡೆಯ ಮೇಲಿದೆ. ಇಲ್ಲೇ ದೇವಿಯು ಮಹಿಷಾಸುರನನ್ನು ಸಂಹರಿಸಿದಳೆಂಬ ಪ್ರತೀತಿ ಇದೆ.

ಹತ್ತಿರದಲ್ಲೇ ಸೀತಾ ಮಡಿ ಎನ್ನುವ ಸುಂದರ ವನವಿದೆ. ವಾಲ್ಮೀಕಿ ಆಶ್ರಮದಲ್ಲಿದ್ದ ಸೀತೆ, ಭೂತಾಯಿಯಲ್ಲಿ ಲೀನವಾದ ಸ್ಥಳವನ್ನು 'ಸೀತಾ ಸಮಾಹಿತ ಸ್ಥಳ'ವೆಂದು ಗುರುತಿಸಲಾಗಿದೆ. ಪಕ್ಕದಲ್ಲೇ 108 ಅಡಿ ಎತ್ತರದ ಆಂಜನೇಯನ ಪ್ರತಿಮೆ ಇದೆ.

ಸುತ್ತಿ ಬಳಸಿ ಹೋದುದರಿಂದ ಕಾಶಿ ತಲುಪಲು ಸಂಜೆಯಾಯಿತು. ಮಂದಿರದ ಹತ್ತಿರ ಎಂದು ಬುಕ್ ಮಾಡಿದ ವಸತಿ ನೋಡಿದರೆ ತುಂಬಾ ತೊಂದರೆ ಕೊಟ್ಟಿತು. ಆ ಸಣ್ಣ ಗಲ್ಲಿಗೆ ಸೈಕಲ್ ರಿಕ್ಷಾಗಳೂ ಹೋಗಲು ತಯಾರಿರಲಿಲ್ಲ. ನಮ್ಮ ಲಗೇಜು ಮತ್ತು ನನ್ನನ್ನು ಸ್ಕೂಟರ್ ಮೇಲೆ ಸಾಗಿಸಿದರು. ಗೆಳತಿಯರು ನಡೆದು ಬಂದರು.  ಮೂರನೆಯ ಮಹಡಿಗೆ ಲಿಫ್ಟ್ ಸಹ ಇರಲಿಲ್ಲ. ಕೊನೆಗೆ ನಮ್ಮ ಲೀಡರ್ ಗೆ ಇಷ್ಟವಾಗದೆ ವಾಪಸ್ಸು ಒಂದು ಕಿ.ಮೀ ದೂರ ನಮ್ಮ ಗಾಡಿ ನಿಂತಿದ್ದ ಕಡೆ ಹೋಗಲು ಬಹಳ ಕಷ್ಟವಾಯಿತು . ದೊಡ್ಡ ರಸ್ತೆಗೆ ಬಂದರೂ ಒಂದೂ ರಿಕ್ಷಾ ಸಿಗಲಿಲ್ಲ. ಕೊನೆಗೆ ಯೋಚಿಸಿ ಅಲ್ಲೇ ನಿಂತಿದ್ದ ಕೈಗಾಡಿಗಳನ್ನು ಬೇಡಿಕೊಂಡು ನಾವಿಬ್ಬರೂ ಕಾರ್ ನಿಲ್ಲಿಸಿದ್ದಕಡೆ ಬಂದೆವು. ಇನ್ನಿಬ್ಬರು ನಡೆದೇ ಬಂದರು. ಇನ್ನೊಂದು ಹೋಟಲ್ ಗೆ ಹೋದರೆ ಅಲ್ಲೂ ಅದೇ ಸಮಸ್ಯೆ. ಮತ್ತೆ ಹುಡುಕಾಟ. ಕೊನೆಗೆ ರಾತ್ರಿ 10 ಗಂಟೆ ಹೊತ್ತಿಗೆ ಒಂದು ಒಳ್ಳೆಯ ಹೋಟೆಲ್ ಸಿಕ್ಕಿತು. ಕಾಶಿಯಲ್ಲಿ ಕಾರು ಉಪಯೋಗವಿಲ್ಲದ್ದರಿಂದ ವಾಪಸ್ಸು



ಕಳಿಸಲಾಯ್ತು. ಬೆಳಗ್ಗೆ ತಯಾರಾಗಿ ಹೊರಬಂದರೆ ಹೋಟೆಲ್ ಮುಂದೆ ರಿಕ್ಷಾಗಳು ಸಾಲು ನಿಂತಿದ್ದವು. ಸರಿ ಬೆಳಗ್ಗೆಯಿಂದ ರಾತ್ರಿಯವರೆಗೆ ನಮ್ಮನ್ನು ಸುತ್ತಿಸಲು ಒಂದು ರಿಕ್ಷಾದವನು ಒಪ್ಪಿದ. ಆನ್ ಲೈನ್ ಬುಕಿಂಗ್ ಆದರಿಂದ ಮೊದಲು ವಿಶ್ವನಾಥನ ದರ್ಶನಕ್ಕೇ ಹೋದೆವು. ಈಗ ಮೋದಿ ಕಾರಿಡಾರ್ ಯೋಜನೆಯಿಂದ ಮಂದಿರದ ಅಕ್ಕ ಪಕ್ಕ ಸುಮಾರು ಒಂದು ಕಿ.ಮೀ. ದೂರದವರೆಗೆ ಬ್ಯಾರಿಕೇಡ್ ಇಟ್ಟು ಬೇರ್ಯಾವ ಸಾರ್ವಜನಿಕ ಗಾಡಿಯೂ ಓಡಾಡದಂತೆ ಮಾಡಿದ್ದಾರೆ. ಆಫೀಸಿಗೆ ನಡೆದೇ ಹೋಗಿ, ಅರ್ಚಕನನ್ನು ಫಿಕ್ಸ್ ಮಾಡಿಕೊಂಡು ಹೊರೆಟೆವು.ಅವನೋ ಬರೀ ಫಾರ್ಮ್ ಕೈಲಿ ಹಿಡಿದುಕೊಂಡು ತನ್ನ ಗಿರಾಕಿಗಳನ್ನು ಹಿಡಿಯಲು ಆಸಕ್ತಿ ಹೊಂದಿದ್ದ. ನನಗೆ ವ್ಹೀಲ್ ಚೇರೂ ಸಿಗಲಿಲ್ಲ. ಬಿಸಿಲಂತೂ ಏರುತ್ತಿತ್ತು. ವಿಶಾಲವಾದ ಪ್ರಾಕಾರದಲ್ಲಿ ಗರ್ಭಗುಡಿಯ ಪಕ್ಕ ಇನ್ನೊಂದು ಶಿವಲಿಂಗ  ಸ್ಥಾಪನೆಯಾಗಿದೆ. ಒಂದು ದೊಡ್ಡ ಹರಿವಾಣದಲ್ಲಿ ಪೂಜಾ ಸಾಮಗ್ರಿ ಮತ್ತು ಒಂದು ಸಣ್ಣ ಸ್ಟೀಲ್ ಬಕೆಟಿನಲ್ಲಿ ಒಂದು ಲೋಟ ಹಾಲಿಗೆ ಅರ್ಧ ಬಕೆಟ್ ನೀರು ಬೆರಸಿ ತಂದು ಕೊಟ್ಟ ಭಡಜೀ.

ಲಿಂಗದ ನಾಲ್ಕೂ ಕಡೆ ಅಭಿಷೇಕಮಾಡುವ ಕುಟುಂಬಗಳನ್ನು ಒಟ್ಟಿಗೆ ಕೂಡಿಸಿ ನಾಲ್ಕು ಪೂಜಾರಿಗಳು ಪೂಜೆ ಮಾಡಿಸಿದರು. ಶಿವನಿಗೆ ಯಾರ ಪೂಜೆ ತೆಗೆದುಕೊಳ್ಳಬೇಕೋ ಎನ್ನುವ confusion create ಮಾಡಿ, ತಮ್ಮ ಕೆಲಸವನ್ನು ಭರಾಟೆಯಿಂದ ಮುಗಿಸಿ ನಮ್ಮನ್ನು ದರ್ಶನಕ್ಕೆ ಕಳಿಸಿದರು. ಅಲ್ಲೋ ನಮಗೆ ಒಂದು ಸಣ್ಣ ಕ್ಯೂ. ಒಬ್ಬ ಅರ್ಚಕ ನಿಲ್ಲುವಷ್ಟೇ ಗರ್ಭಗುಡಿಯಲ್ಲಿ ನೀರಿಗೆ ಹಾಲು ಬೆರಸಿದ ಬಕೆಟ್ ತೊಗೊಂಡು ಮೂಲ ವಿಗ್ರಹದ ಮೇಲೆ ಎರಚಿ ಬಕೆಟ್ ವಾಪಸ್ಸು ಕೊಟ್ಟರು. ಇಂಥ ಪರಿಸ್ಥಿತಿಯಲ್ಲಿ ಇಷ್ಟು ದೂರದಿಂದ ಸಂದರ್ಶಿಸಲು ಬಂದ ಭಕ್ತರ ಭಕ್ತಿಎಲ್ಲಿ ಹಾರಿಹೋಗುತ್ತೋ ಗೊತ್ತಿಲ್ಲ. ಹೀಗೆ ಉಸಿರುಗಟ್ಟಿಸುವ ವಾತಾವರಣ ನಾವೇಕೆ ಸೃಷ್ಟಿಸಿಕೊಳ್ಳುತ್ತೇವೆ ಎಂದು ನನಗನ್ನಿಸಿತು.

ಹಿಂದೆಲ್ಲಾ 5–6 ಬಾರಿ  ಕಾಶಿಗೆ, ಅಂಗಡಿಯ ಸಂದುಗೊಂದಿನ ಗಲ್ಲಿಗಳಲ್ಲಿ ನಡೆದು ಹೋಗಿದ್ದಾಗಲೂ ವಿಶ್ವೇಶ್ವರನ ಮಂದಿರದೊಳಗೆ ಹೋಗಿ , ತೆಗೆದುಕೊಂಡು ಹೋದ ಗಂಗೆಯ ಅಭಿಷೇಕ ಕೈಯಾರೆ ಮಾಡಿ ತೃಪ್ತಿ ಪಟ್ಟುಕೊಂಡು ಬಂದ ದಿನಗಳೇ ವಾಸಿ ಎನ್ನಿಸಿತು. ರಣರಣ ಬಿಸಿಲಿನ ಬೇಗೆಯಲ್ಲೂ ಗೆಳತಿಯರು ವ್ಯಾಪಾರಕ್ಕೆ ಆತುರಪಟ್ಟು, ಸೀರೆಯ ಅಂಗಡಿಗೆ ನುಗ್ಗಿದರು. ಅಲ್ಲೇ ಇಡೀ ಮಧ್ಯಾಹ್ನ ಕಳೆಯಿತು. ಸಂಜೆ ಆರತಿ ನೋಡಲು ಹೋದೆವು. ಸುಮಾರು 80 ಅಡ್ಡಾದಿಡ್ಡಿ ಮೆಟ್ಟಲುಗಳನ್ನು ರಿಕ್ಷಾದವನೇ ನನ್ನ ಕೈ ಹಿಡಿದು ಇಳಿಸಿದ.  ಅಂಬಿಗರು ನದಿಯಲ್ಲಿ,  ದೋಣಿಗಳ ಮೇಲೆ ಕುರ್ಚಿಗಳನ್ನು ಹಾಕಿ ಯಾತ್ರಿಕರನ್ನು ಆಕರ್ಷಿಸುತ್ತಿದ್ದರು.  ಅಂಥ ಒಂದು ದೋಣಿಯಲ್ಲಿ ಕೂತು ಆರತಿ ನೋಡಿದೆವು. ಮತ್ತೆ ರಿಕ್ಷಾದವನೇ ಬಂದು ಮಾಜಿ ಎಂದು ಕರೆದು ಮೆಟ್ಟಲುಗಳನ್ನು ಹತ್ತಿಸಿದ. ಆಗ ನನಗನ್ನಿಸಿದ್ದು these are the deeds which cannot be returned ಅಂತ ? ಕಾಶಿಯಲ್ಲಿ ಇದ್ದ ಎರಡೂ ದಿನವೂ ಮನೆಯವರಿಗಿಂತ

ಹೆಚ್ಚಾಗಿ ಅವನು ನನ್ನನ್ನು ಜೋಪಾನ ಮಾಡಿದ.

ಮಾರನೆಯ ದಿನ ಮತ್ತೆ ಅಭಿಷೇಕಕ್ಕೆ ಬರೆಸಿ ದರ್ಶನ ಪಡೆದಿದ್ದಾಯ್ತು. ಆ ದಿನ ಅನ್ನಪೂರ್ಣೇಶ್ವರಿ ಮತ್ತು ವಿಶಾಲಾಕ್ಷಿಯನ್ನು ನೋಡಲೇ ಬೇಕೆಂದು ಸುತ್ತಿ ಸುತ್ತಿ ದಾರಿ ತಿಳಿಯದೆ ಬಿಸಿಲಲ್ಲಿ ಬೆಂಡಾಗಿ ಹೋದೆವು.

ರೂಮಿಗೆ ಬಂದವರೇ ಸುಸ್ತಾಗಿ ಸ್ವಲ್ಪಹೊತ್ತು ಮಲಗಿ ಸಂಜೆ ಏರ್ಪೋರ್ಟ್‌ಗೆ ಹೊರಟೆವು.

ಹೀಗೆ ಒಂದು ವಾರದ ಪ್ರವಾಸ ಮುಗಿಸಿ ಬಂದೆವು ಬಂದ ಮೇಲೆ ಕಾಶಿಯ exposure ಮತ್ತು ಮುಂಬಯಿಯ heatwave ನಿಂದ 15 ದಿನ ಸುಧಾರಿಸಿಕೊಳ್ಳಬೇಕಾಯಿತು. ಒಂದೇ ಸಮಾಧಾನ, ಪ್ರವಾಸದ ಹುಚ್ಚು ಫಲಿಸಿತ್ತು.

●

## ಮುಂಬೈ ವಿಶ್ವವಿದ್ಯಾಲಯ, ಕನ್ನಡ ವಿಭಾಗ: ಕನ್ನಡ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಪದವಿ ಪ್ರದಾನ ಕಾರ್ಯಕ್ರಮ

## ಕನ್ನಡದ ಸಮಗ್ರ ಬೆಳವಣಿಗೆಯಲ್ಲಿ ವಿಭಾಗದ ಪಾತ್ರ ಮಹತ್ವದ್ದು : ಡಾ. ಸುರೇಶ್ ರಾವ್

ಮುಂಬೈ ವಿವಿ ಕನ್ನಡ ವಿಭಾಗವು ಇಂದು ಅತ್ಯಂತ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದ್ದು, ವಿವಿಧ ಕನ್ನಡ ಮತ್ತು ತುಳು ಸಂಘ ಸಂಸ್ಥೆಗಳ ಮುಖ್ಯಸ್ಥರನ್ನು ಒಂದೇ ವೇದಿಕೆಯಡಿ ತರುವಲ್ಲಿ ಯಶಸ್ವಿಯಾಗಿದೆ. ಇದು ಸಮುದಾಯದಲ್ಲಿ ಕನ್ನಡ ಕಲಿಯುವ ಆಸಕ್ತಿಯನ್ನು ಹೆಚ್ಚಿಸಿದೆ. ಇಂತಹ ಸಂಸ್ಥೆಗಳು ಮತ್ತು ವಿಭಾಗದ ಕಾರ್ಯವೈಖರಿಯಿಂದಾಗಿ ತಾವೂ ಕೂಡ ಈ ಸಂಸ್ಥೆಯೊಂದಿಗೆ ಬೆರೆಯಲು, ಪ್ರೀತಿ ಮತ್ತು ವಿಶ್ವಾಸದಿಂದ ಈ ಕಾರ್ಯಕ್ರಮಕ್ಕೆ ಆಗಮಿಸಲು ಪ್ರೇರಣೆ ಸಿಕ್ಕಿದೆ. ಮುಂಬೈನಲ್ಲಿರುವ ಎಲ್ಲಾ ತುಳು–ಕನ್ನಡಿಗರ ಮಕ್ಕಳು ಕನ್ನಡ ಭಾಷೆ ಮತ್ತು ಸಾಹಿತ್ಯದ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಿ, ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಖ್ಯಾತ ವೈದ್ಯರೂ, ಬಿ. ಎಸ್. ಕೆ. ಬಿ. ಗೋಕುಲ– ಇದರ ಅಧ್ಯಕ್ಷರೂ ಆಗಿರುವ ಡಾ. ಸುರೇಶ್ ರಾವ್ ಅಭಿಪ್ರಾಯಪಟ್ಟರು.




ಅವರು ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಜು. 25ರ ಶನಿವಾರದಂದು ಕವಿ ಕುಸುಮಾಗ್ರಜ ಮರಾಠಿ ಭಾಷಾ ಭವನ, ವಿದ್ಯಾನಗರಿ, ಸಾಂತಾಕ್ರೂಜ್ ಇಲ್ಲಿ ಆಯೋಜಿಸಿದ್ದ ಕನ್ನಡ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿಭಾಗದ ಮುಖ್ಯಸ್ಥ, ಹಿರಿಯ ಪ್ರಾಧ್ಯಾಪಕರಾದ ಪ್ರೊ. ಜಿ. ಎನ್. ಉಪಾಧ್ಯ ಅವರು ಮಾತನಾಡಿ, ಕನ್ನಡ ವಿಭಾಗವು ಕಳೆದ ಹಲವು ದಶಕಗಳಿಂದ ಕನ್ನಡ ಬಾರದವರಿಗೆ, ಕನ್ನಡೇತರರಿಗೆ ಕನ್ನಡದ ದೀಕ್ಷೆಯನ್ನು ನೀಡುವ ಮತ್ತು ಕಲಿಸುವ ಕಾಯಕವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದೆ. ಕನ್ನಡವನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ತುಳು–ಕನ್ನಡಿಗರು ನೀಡುತ್ತಿರುವ ನಿರಂತರ ಬೆಂಬಲ ಮತ್ತು ಮುಂಬೈ ವಿಶ್ವವಿದ್ಯಾಲಯದ ಪ್ರೋತ್ಸಾಹದಿಂದಾಗಿ ಇಂತಹ ಕೋರ್ಸ್‌ಗಳನ್ನು ನಡೆಸುವುದು ಸಾಧ್ಯವಾಗಿದೆ ಎಂದು ತಿಳಿಸುತ್ತಾ, ಮುಂದಿನ ದಿನಗಳಲ್ಲಿ ಎಲ್ಲರೂ ಹೆಚ್ಚಿನ ಆಸಕ್ತಿಯಿಂದ ಕನ್ನಡ ಕಲಿಕೆಯಲ್ಲಿ ಪಾಲ್ಗೊಳ್ಳಬೇಕೆಂಬ ಆಶಯವನ್ನು ವ್ಯಕ್ತಪಡಿಸಿದರು.

ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಹಿರಿಯ ಸಂದರ್ಶಕ ಪ್ರಾಧ್ಯಾಪಕರಾದ ಡಾ. ಉಮಾ ರಾಮರಾವ್ ಅವರು ಮಾತನಾಡಿ, ಭಾಷೆಯನ್ನು ಕಲಿತಷ್ಟೂ ವ್ಯಕ್ತಿತ್ವ ವಿಕಸನವಾಗುತ್ತದೆ. ಈ ದೃಷ್ಟಿಯಿಂದ, ಆಸಕ್ತಿಯಿರುವ ಪ್ರತಿಯೊಬ್ಬರೂ ಕನ್ನಡ ಕಲಿಯಬೇಕು ಎಂಬ ಉದ್ದೇಶದಿಂದ ವಿಭಾಗವು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ವಿಭಾಗವು ಎರಡು ಹಂತದ ತರಗತಿಗಳನ್ನು ನಡೆಸುತ್ತಿದೆ. ಮೊದಲನೆಯದು 'ಸರ್ಟಿಫಿಕೇಟ್ ಕೋರ್ಸ್ ಇನ್ ಕನ್ನಡ', ಇದು ಆರಂಭಿಕ ಹಂತದ ಕೋರ್ಸ್ ಆಗಿದ್ದು, ಕನ್ನಡ ಬಾರದವರಿಗೂ ವರ್ಣಮಾಲೆ, ವ್ಯಾಕರಣ ಮತ್ತು ಸಂಭಾಷಣೆಯನ್ನು ಕಲಿಸಲು ವಿನ್ಯಾಸಗೊಳಿಸಲಾಗಿದೆ. ಎರಡನೆಯದು 'ಡಿಪ್ಲೋಮಾ ಕೋರ್ಸ್ ಇನ್ ಕನ್ನಡ', ಇದು ಹೆಚ್ಚು ಪ್ರಗಲ್ಭವಾದ ಮತ್ತು ಸಾಹಿತ್ಯಕ್ಕೆ ಒತ್ತು ನೀಡುವ ಮುಂದುವರೆದ ಕೋರ್ಸ್ ಆಗಿದೆ ಎಂದು ವಿವರಿಸಿದರು. ಈ ಕೋರ್ಸ್‌ಗಳನ್ನು ಮಾಡುವುದರಿಂದ ಭಾಷೆಯ ಜ್ಞಾನ ಸಿಗುವುದಷ್ಟೇ ಅಲ್ಲ, ಕರ್ನಾಟಕದಲ್ಲಿ ವೈದ್ಯಕೀಯ ಅಥವಾ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಸೇರಲು ಅಗತ್ಯವಿರುವ ಕನ್ನಡ ಪರೀಕ್ಷೆಯನ್ನು ಪಾಸು ಮಾಡಲು ಇದು ವಿದ್ಯಾರ್ಥಿಗಳಿಗೆ ಬಹಳ ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸರ್ಟಿಫಿಕೇಟ್ ಕೋರ್ಸ್ ಮತ್ತು ಡಿಪ್ಲೊಮಾ ಕೋರ್ಸ್ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ವಿದ್ಯಾರ್ಥಿಗಳಾದ ಉಷಾ ಶೆಟ್ಟಿ ಮತ್ತು ಪುಷ್ಪಲತಾ ಗೌಡ ಅವರು ಕೋರ್ಸ್ ಸಂಬಂಧಿತ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಮುಖ್ಯ ಅತಿಥಿಗಳನ್ನು ಶಾಲು ಹೊದಿಸಿ, ಕೃತಿ ನೀಡಿ ಗೌರವಿಸಲಾಯಿತು. ಶಿಕ್ಷಕರಾದ ಕಲಾ ಭಾಗ್ವತ್, ಗೀತಾ ಮಂಜುನಾಥ್, ಕುಮುದಾ ಆಳ್ವ ಮತ್ತು ಸವಿತಾ ಅರುಣ್ ಶೆಟ್ಟಿ ಉಪಸ್ಥಿತರಿದ್ದರು. ಶಿಕ್ಷಕರಿಗೆ ಕೃತಿ ಗೌರವ ನೀಡಲಾಯಿತು. ಕಾರ್ಯಕ್ರಮದ ಸಂಯೋಜನೆಯನ್ನು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ್ ಶೆಟ್ಟಿ ಮಾಡಿದರು. ವಿದ್ಯಾ ರಾಮಕೃಷ್ಣ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.


●

# PIN CODE & DIGI PIN



✍ ಶಶಿಕಾಂತ ಜೋಶಿ


ನಾವೆಲ್ಲರೂ ಪತ್ರ ಬರೆದಿದ್ದೇವೆ. ತಲುಪಿದ ಪತ್ರ ಓದಿದ್ದೇವೆ. ಈ ಪತ್ರ ನಿಮ್ಮ ಸರಿಯಾದ ವಿಳಾಸಕ್ಕೆ ತಲುಪಲು ಕಾರಣ, ಪ್ರತಿ ಪತ್ರದ ವಿಳಾಸದ ಕೆಳಗೆ ಇರುವ ಆರು ಮನೆಗಳ ಸಂಖ್ಯೆ. ಇದಕ್ಕೆ ಅಂಚೆ ಖಾತೆಯವರು PIN ಅನ್ನುತ್ತಾರೆ. PIN ಅಂದರೆ POSTAL INDEX NUMBER. ಇದನ್ನು ಕಂಡು ಹಿಡಿದವರು ಮಹಾರಾಷ್ಟ್ರದ ಶ್ರೀ ಶ್ರೀರಾಮ ಭೀಕಾಜಿ ವೇಲನಕರ್. ಪ್ರತಿಭಾನ್ವಿತ ವ್ಯಕ್ತಿ. ಇವರು ಅಂಚೆ ಮತ್ತು ತಂತಿ ಖಾತೆಯಲ್ಲಿ ದೊಡ್ಡ ಹುದ್ದೆಯಲ್ಲಿದ್ದು ನಾಸಿಕ, ಮಧ್ಯಪ್ರದೇಶದ ಊರುಗಳಲ್ಲಿ ಹಾಗೂ ಕೊಲಕತ್ತಾದಲ್ಲಿ ಸೇವೆ ಸಲ್ಲಿಸಿದ್ದಾರೆ. ಕೆಲಸ ಮಾಡುವ ಕೆಲ ವರ್ಷಗಳಲ್ಲಿ ಪತ್ರ ವಿಲೇವಾರಿ ಮಾಡುವ (Sorting) ಹಂತದಲ್ಲಿ ಕೆಲವೊಂದು ಲೋಪ ದೋಷಗಳನ್ನು ಕಂಡು ಹಿಡಿದರು. ಬಹಳಷ್ಟು ಜನರು ತಮ್ಮ ಪ್ರಾಂತೀಯ ಭಾಷೆಯಲ್ಲಿಯೇ ವಿಳಾಸವನ್ನು ಬರೆಯುತ್ತಿದ್ದರು. ಅಂಚೆ ಸಿಬ್ಬಂದಿ ಹೇಗೂ ಅವರಿವರಿಂದ ಕೇಳಿ ಸರಿಯಾಗಿ ತಲುಪಿಸುತ್ತಿದ್ದರು. ಮುಂದಿನ ಸರತಿ ಬರೆಯುವ ಅಕ್ಷರಗಳ ಬಗ್ಗೆ. ಅದನ್ನು ಓದಲು ಹರಸಾಹಸ ಪಡುತ್ತಿದ್ದರು. (ವೈದ್ಯರು



ಕಾಗದದ ಮೇಲೆ ಔಷಧಿಗಳ ಹೆಸರನ್ನು ಬರೆದ ಹಾಗೆ) ಇದಕ್ಕಿಂತಲೂ ಹೆಚ್ಚಿನ ಪತ್ತೇದಾರಿ ಕೆಲಸ ಅಂದರೆ ಒಂದೇ ಪ್ರದೇಶ ಅಥವಾ ಪ್ರಾಂತದಲ್ಲಿ ಎರಡು ಅಥವಾ ಅದಕ್ಕಿಂತಲೂ ಹೆಚ್ಚಿಗೆ ಒಂದೇ ಊರಿನ ಹೆಸರು. ಉದಾ: ಅಮರಾವತಿ: ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ; ಖಾನಾಪೂರ: ಕರ್ನಾಟಕ & ಮಹಾರಾಷ್ಟ್ರ; ಔರಂಗಬಾದ್ (ಬಿಹಾರ, ಉತ್ತರಪ್ರದೇಶ, ಮಧ್ಯಪ್ರದೇಶ); ಬಿಲಾಸಪುರ: ಹಿಮಾಚಲ ಪ್ರದೇಶ ಮತ್ತು ಛತ್ತಿಸಗಡ; ಉದಯಪುರ : ರಾಜಸ್ಥಾನ & ತ್ರಿಪುರ ಇನ್ನು ಹಲವಾರು ಈ ರೀತಿ ಇವೆ.

ಈ ರೀತಿ ರಾಜ್ಯದ ಅಥವಾ ಜಿಲ್ಲೆಯ ಹೆಸರನ್ನು ಬರೆಯದೆ ಊರಿನ ಹೆಸರನ್ನು ಮಾತ್ರ ಬರೆದರೆ ಸಿಬ್ಬಂದಿ ತಮ್ಮ ಬುದ್ಧಿಯನ್ನು ಖರ್ಚು ಮಾಡಿ, ಆ ಪತ್ರದ ಭಾಷೆ, ಪತ್ರದ ವಿಷಯ (ಕೆಲವೊಮ್ಮೆ ಓದಿ ಕೆಲವೊಂದಕ್ಕೆ) ಅದು ಸರಿಯಾದ ವಿಳಾಸಕ್ಕೆ ತಲುಪಿಸಲು ಹರಸಾಹಸ ಪಡುತ್ತಿದ್ದರು. ಇದರಿಂದ ಎಲ್ಲರ ಶ್ರಮ ಹಾಗೂ ವೇಳೆ ಅಪವ್ಯಯವಾಗುತ್ತಿತ್ತು. ಇದರಿಂದ ಪತ್ರ ಸರಿಯಾದ ವಿಳಾಸ ತಲುಪಲು ತಡವಾಗುತ್ತಿತ್ತು. 1971 ರ ಭಾರತ ಪಾಕಿಸ್ತಾನ ಯುದ್ಧದ ಸಮಯದಲ್ಲಿ ಸೈನಿಕರಿಗೆ ಅವರ ಪತ್ರಗಳು ಬಹಳ ತಡವಾಗಿ ತಲುಪುತ್ತಿದ್ದವು. ಶ್ರೀ ವೇಲನಕರ್ ಅವರು ಆ ಸಮಯದಲ್ಲಿ ಕೊಲಕತ್ತಾದಲ್ಲಿ ಕೆಲಸ ಮಾಡುತ್ತಿದ್ದಾಗ ಒಬ್ಬ ಕೇರಳದ ಸೈನ್ಯದ ಅಧಿಕಾರಿ ಬಂದು ಅಲವತ್ತುಕೊಂಡ. ತಾನು ಬರೆದ ಪತ್ರ ಊರಿಗೆ ಬಹು ತಡವಾಗಿ ತಲುಪಿರುವುದು ಮತ್ತು ಅಲ್ಲಿಂದ ಮರು ಉತ್ತರವೂ ಸಹ ಇವರ ಕೈಗೆ ತಡವಾಗಿ ಬಂದು ತಲುಪುತ್ತಿತ್ತು.

ಈ ರೀತಿಯ ನಾನಾ ತೊಂದರೆಗಳನ್ನು ಹೇಗೆ ನಿವಾರಿಸಬೇಕೆಂಬ ವಿಚಾರ ಶ್ರೀ ವೇಲನಕರರು ಮಾಡಿದರು ಮತ್ತು ಮೇಲಧಿಕಾರಿಗಳ ಗಮನಕ್ಕೆ ತಂದರು. ಬಹು ಪರಿಶ್ರಮದ ನಂತರ ತಾವು ತಯಾರು ಮಾಡಿದ ಹೊಸ ಅವಿಷ್ಕಾರದ ವರದಿಯನ್ನು ಭಾರತ ಸರಕಾರಕ್ಕೆ ಒಪ್ಪಿಸಿದರು. ಇದು ಎಲ್ಲರ ಮೆಚ್ಚುಗೆ ಪಡೆಯಿತು. ಆಗಿನ ಪ್ರಧಾನಮಂತ್ರಿ ದಿ। ಶ್ರೀಮತಿ ಇಂದಿರಾ ಗಾಂಧಿಯವರು ನಮ್ಮ ಸ್ವಾತಂತ್ರ್ಯದ ದಿನವಾದ 15 ಅಗಸ್ಟ್ 1972 ರಂದು PIN CODE ಅನ್ನು ಉದ್ಘಾಟಿಸಿದರು. ಆದಿನ ಭಾರತ ಸ್ವತಂತ್ರವಾಗಿ 25 ವರ್ಷಗಳಾಗಿದ್ದವು. ಭಾರತದ ಎಲ್ಲ ಪ್ರಜೆಗಳಿಗೆ ಬೆಳ್ಳಿ ಹಬ್ಬಕ್ಕೆ ಈ ಅಮೂಲ್ಯ ಕಾಣಿಕೆ ಕೊಟ್ಟರು. ಅಲ್ಲದೆ PIN CODE ಅನ್ನು ಕಡ್ಡಾಯ (Mandatory) ವಾಗಿ ಬರೆಯಬೇಕೆಂದು ಪ್ರಜೆಗಳಿಗೆ ಮನವಿ ಮಾಡಿದರು. ಹೀಗಾಗಿ ನಾವು ಈಗಲೂ ಯಾವುದೇ ರೀತಿಯ ಪತ್ರದ ಮೇಲೆ ರೀತಿಯ ಪತ್ರದ ಮೇಲೆ PIN CODE 6 ಖಾಲಿ ಮನೆಗಳು ಇರುವುದು ಕಂಡು ಬರುತ್ತದೆ.



ಈ ಆರು ಸಂಖ್ಯೆ ವ್ಯಾಪ್ತಿ 10000 ದಿಂದ 999999. ಶ್ರೀ. ವೇಲನಕರ ಅವರು ನಮ್ಮ ಭಾರತ ದೇಶವನ್ನು 4 ಭಾಗಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ದಿಕ್ಕಿಗೆ ಒಂದು ಅಂಕೆ ಕೊಟ್ಟರು. ಉತ್ತರಕ್ಕೆ (North) 1 & 2; ಪಶ್ಚಿಮಕ್ಕೆ (West) 3 & 4; ದಕ್ಷಿಣ (South) 5 & 6; ಪೂರ್ವ (East) 7 & 8 ಮತ್ತು ಸೈನ್ಯಕ್ಕೆ 9 ಅಂಕೆಯನ್ನು ಕೊಟ್ಟರು.

ಮೊದಲನೆಯ ಸ್ಥಳ ಭೌಗೋಲಿಕ ಪ್ರದೇಶ (Geographical Region ) ಪ್ರತಿನಿಧಿಸಿದೆ; 2ನೇ ಸ್ಥಳ ರಾಜ್ಯ (State) ; 3ನೇ ಸ್ಥಳ ಆ ರಾಜ್ಯದ ಜಿಲ್ಲೆ (District) ಹಾಗೂ ಕೊನೆಯ ಮೂರು ಸ್ಥಳಗಳು ಆ ಪ್ರದೇಶದ ಅಂಚೆ ಕಛೇರಿಯನ್ನು ಪ್ರತಿನಿಧಿಸುತ್ತದೆ.

ಉದಾಹರಣೆಗೆ: ರಾಜ್ಯವಾರು ವಿಂಗಡನೆ ಈ ಕೆಳಗಿನಂತೆ ಇದೆ.

| | | |
|---|---|---|
| 11 | > | ದೆಹಲಿ (Delhi) |
| 12 &13 | > | ಹರಿಯಾಣ (Hariyana) |
| 14 to 16 | > | ಪಂಜಾಬ (Punjab) |
| 17 | > | ಹಿಮಾಚಲ ಪ್ರದೇಶ (HP) |
| 18 &19 | > | ಜಮ್ಮು ಕಾಶ್ಮೀರ, ಲಢಾಕ (J & K, Ladhak) |
| 20 to 28 | > | ಉತ್ತರಪ್ರದೇಶ & ಉತ್ತರಾಖಂಡ ( UP & Uttarakhand) |
| 30 to 34 | > | ರಾಜಸ್ಥಾನ (Rajasthan) |
| 36 to 39 | > | ಗುಜರಾತ್ (Gujarat) |
| 40 to 44 | > | ಮಹಾರಾಷ್ಟ್ರ (Maharashtra) |
| 45 to 48 | > | ಮಧ್ಯಪ್ರದೇಶ (Madhya Pradesh) |
| 49 | > | ಛತ್ತಿಸಗಡ (Chattisgad) |
| 50 to 53 | > | ಆಂಧ್ರಪ್ರದೇಶ ಹಾಗು ತೆಲಂಗಾಣ (Anadhra Pradesh & Telangana) |
| 56 to 59 | > | ಕರ್ನಾಟಕ (Karnataka) |
| 60 to 64 | > | ತಮಿಳುನಾಡು, ಪುದುಚೇರಿ (Tamilnadu, Pondichery) |
| 67 to 69 | > | ಕೇರಳ&ಲಕ್ಷದ್ವೀಪ (Keralam & Lakshadweep) |
| 70 to 73 | > | ಪಶ್ಚಿಮ ಬಂಗಾಲ ( West Bengal) |
| 74 | > | ಅಂಡಮಾನ ನಿಕೋಬಾರ ದ್ವೀಪಗಳು (Andaman & Nicobar Islands) |
| 75 to 77 | > | ಒಡಿಸ್ಸಾ (Odissa) |
| 78 | > | ಅಸ್ಸಾಂ (Assam) |
| 79 | > | ಪೂರ್ವ ರಾಜ್ಯಗಳು : ಸಿಕ್ಕಿಂ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ, ಮಿಜೊರಾಮ್, ಮೇಘಾಲಯ, ತ್ರಿಪುರಾ |
| 80 | > | ಬಿಹಾರ ಮತ್ತು ಝಾರಖಂಡ (Bihar & Jharkhand) |
| 90 | > | ನಂತರದ ಎಲ್ಲವೂ ಸೈನ್ಯ ಅಂಚೆ |

ಮೂರನೆಯ ಸ್ಥಾನ ಆ ರಾಜ್ಯದ ಜಿಲ್ಲೆ ಅಥವಾ ಪ್ರಾಂತ್ಯದ ಸಂಖ್ಯೆ. ನಂತರದ ಮೂರು ಸ್ಥಾನಗಳು ಆ ಪ್ರದೇಶಗಳಲ್ಲಿರುವ ಅಂಚೆ ಕಛೇರಿಯ ಸಂಖ್ಯೆ.

ನಮ್ಮ ಭಾರತದಲ್ಲಿ 164000ಕ್ಕಿಂತಲೂ ಹೆಚ್ಚಿಗೆ ಅಂಚೆ ಕಛೇರಿಗಳಿವೆ ಹಾಗೂ 19250 ಕ್ಕಿಂತಲೂ ಹೆಚ್ಚಿಗೆ PINCODE ನ್ನು ಉಪಯೋಗಿಸಲಾಗಿದೆ.

ನಮ್ಮ ಭಾರತದಲ್ಲಿ PINCODE ಉಪಯೋಗಿಸಿದರೆ USA ನಲ್ಲಿ ZIP ಬಳಸಲಾಗುತ್ತಿದೆ. ಅದರಲ್ಲಿ 5 ಮನೆಗಳಿವೆ.

ಈಗಿನ ಆಧುನಿಕ ಯುಗದಲ್ಲಿ ಪರಸ್ಪರ ಪತ್ರ ವ್ಯವಹಾರ ಕಡಿಮೆ ಆಗಿದೆ. ಈಗ ಈ ರೀತಿಯ ವ್ಯವಹಾರ WhatsApp, Email, Instagram ಅಂತ ಇನ್ನೂ ಅನೇಕ ಮಾಧ್ಯಮಗಳು mobileನಲ್ಲಿ ಬಂದಿವೆ. ಆದರೆ ಇನ್ನೂ ಸರಿಯಾದ ವಿಳಾಸಕ್ಕೆ courier Company ಗಳಾಗಲಿ, Amazon, Zomato etc. ಇನ್ನೂ PINCODE ಸಹಾಯ ಪಡೆಯುತ್ತಾರೆ. ಈ ರೀತಿಯ ಜನ ಉಪಯೋಗಿ ಕೆಲಸ ಮಾಡಿದ ಶ್ರೀ ವೇಲನಕರ ಅವರಿಗೆ ಭಾರತೀಯರೆಲ್ಲರೂ ಚಿರಋಣಿಯಾಗಿದ್ದಾರೆ.

ಆದರೆ ಈ ಆಧುನಿಕ DIGITAL ಯುಗದಲ್ಲಿ ಭಾರತವು ಇನ್ನೂ ಮುಂದೆ ತನ್ನ ದಾಪುಗಾಲು ಹೆಜ್ಜೆಯನ್ನು ಇಟ್ಟಿದೆ. ನಾವು ಬರೆದ ವಿಳಾಸದ ಜೊತೆಗೆ ಇರುವ PINCODE ಬಹಳಷ್ಟು Sq.km. ಕ್ಷೇತ್ರಫಲವನ್ನು ಹೊಂದಿರುತ್ತದೆ. ಅದರಲ್ಲಿ ಒಂದೇ ಸಮನಾದ ಜನರ ಹೆಸರುಗಳು ಇರಬಹುದು, ಅಥವಾ ಅವರ ಮನೆ (flat) ಹೆಸರುಗಳಾಗಲಿ, ಅಥವಾ ಒಂದೇ society ಯ ಹೆಸರುಗಳು ಇರಬಹುದು. ಇದನ್ನು ಶೋಧಿಸಲಿಕ್ಕೆ ಸ್ವಲ್ಪ ಸಮಯವನ್ನು ವ್ಯಯ ಮಾಡಬೇಕಾಗುತ್ತದೆ. ಇದಕ್ಕೆ ಉಪಾಯವಾಗಿ ನಮ್ಮ ಭಾರತದ ಅಂಚೆ ಇಲಾಖೆ, IIT Hyderabad ಹಾಗೂ ISRO ದ ರಾಷ್ಟ್ರೀಯ Remote Sensing satellite ಜೊತೆಯಾಗಿ ಒಂದು ವಿನೂತನ ಪದ್ಧತಿಯನ್ನು ಕೂಡ ಮಾಡಿದ್ದಾರೆ. ಅದರ ಹೆಸರು DIGIPIN – DIGITAL POSTAL INDEX NUMBER.

ಇದು ಭಾರತದ Geo – coded open source ವ್ಯವಸ್ಥೆ ಇದ್ದು, ದೇಶದ ಯಾವುದೇ ನಿಖರವಾದ ಸ್ಥಳವನ್ನು 4x4 Sq. Mt. ಅಂತರ ಒಳಗೆ




ಗುರುರಿತಿಸಬಹುದು. ಈ DIGICODE 10 characters, alphanumeric code ಒಳಗೊಂಡಿದ್ದು, (2, 3, 4, 5, 6, 7, 8, 9 & ಅ, ಈ, ಎ, ಏ, ಐ, ಒ, P, T )

ಅತಿ ಕ್ಲಿಷ್ಟ ರೀತಿಯಲ್ಲಿ ತಾಂತ್ರಿಕತೆಯ ಅಂಶಗಳನ್ನು ಹೊಂದಿದ್ದು, ಇದು ನಮ್ಮ ವಿಳಾಸದ ಅಕ್ಷಾಂಶ ಹಾಗೂ ರೇಖಾಂಶಗಳ (Latitude& Longitude) ಸಂಖ್ಯೆಯನ್ನು ಹೊಂದಿರುತ್ತದೆ. ಭಾರತದಲ್ಲಿ ಕಳೆದ ವರ್ಷ 2025 DIGIPIN ಪ್ರಾರಂಭಗೊಂಡಿದ್ದು ಇನ್ನೂ ಕೆಲವೇ ಸಮಯದಲ್ಲಿ ಸಂಪೂರ್ಣ ಭಾರತವನ್ನು ಒಳಪಡಿಸುವ ಕಾರ್ಯದಲ್ಲಿ ಹೆಜ್ಜೆಯನ್ನಿಟ್ಟಿದೆ. ಇದಲ್ಲದೆ ನಮ್ಮ ವಿಳಾಸ DIGI PIN ಹೇಗೆ ಕಂಡುಹಿಡಿಯಬೇಕೆಂಬುದರ ಬಗ್ಗೆ APP ಸಹ ಅಂಚೆ ಇಲಾಖೆ ಬಿಡುಗಡೆ ಮಾಡಿದೆ.

ನಮ್ಮ ಮೈಸೂರು ಅಸೋಸಿಯೇಷನ್ ಮಾಟುಂಗ DIGIPIN ಈ ರೀತಿ ಇದೆ
4FK52L3M87

National Kannada Education Society (NKES) Wadala ಶಾಲೆಯ DIGIPIN ಈ ರೀತಿ ಇದೆ.
4FK 55F8 46C

ಇದಲ್ಲದೆ DIGIPIN ಗೆ GPS, GIS, ಮುಂತಾದ ಆಧುನಿಕ ಜನ ಉಪಯೋಗಿ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಒಟ್ಟಾರೆ ನೋಡಿದರೆ ಈ digital ಯುಗದಲ್ಲಿ ಎಲ್ಲ ತರಹದ ಸಂದೇಶಗಳನ್ನು ಅತಿ ಬೇಗ ತಲುಪಿಸುವ ಪ್ರಕ್ರಿಯೆಯನ್ನೂ ಭಾರತ ಹಮ್ಮಿಕೊಂಡಿದೆ. ಅದರಲ್ಲಿ ಎಲ್ಲರೂ ಭಾಗಿಯಗೋಣ ಹಾಗೂ ಯಶಸ್ವಿಯಾಗಲಿ ಎಂದು ಹಾರೈಸೋಣ. ●

## ನಂಬಿಕೆ

ಭಾನುವಾರ ಮಧ್ಯಾಹ್ನ ಸುಮಾರು 2.30ಕ್ಕೆ Station ಗೆ ಹೋದೆ. Mega Block ಕಾರಣ 1–2ರಲ್ಲಿ ಯಾವ ರೈಲು ಬರಲಿಲ್ಲ. ಭಾರವಾದ ಚೀಲ, ನಮ್ಮ ಮೈಸೂರು ಅಸೋಸಿಯೇಷನ್ ಶತಮಾನೋತ್ಸವದ ಕಾರ್ಯಕ್ರಮ 19ಕ್ಕೆ ಇತ್ತು. ಹಾಗಾಗಿ ಅಭ್ಯಾಸ (ಹಾಡುಗಳ) ಮಾಡಲು ಮಾಟುಂಗಾಕ್ಕೆ ಹೊರಟಿದ್ದೆ. ನಡೆಯುತ್ತಾ 4ನೇ platform ಗೆ ಬಂದೆ. ಎಲ್ಲೂ ರೈಲಿನ ಸುಳಿವಿಲ್ಲ. ಆಗಲೇ 3 ಗಂಟೆ ಆಗಿತ್ತು. 4ಕ್ಕೆ ಸೇರಬೇಕಿತ್ತು. ಸರಿ ಹಾಗೆಯೇ platform 5ರ ಕಡೆಗೆ ಬಂದೆ, ಖುಷಿಯಿಂದ ಬಂದ ರೈಲು ಹತ್ತಿಬಿಟ್ಟೆ. ಹಿಂದು ಮುಂದು ನೋಡದೇ ಬಾಗಿಲ ಬಳಿ ಒಬ್ರ ನಿಂತಿದ್ದ ವ್ಯಕ್ತಿ ಪಕ್ಕ ನಿಂತೆ. ಸ್ವಲ್ಪ ದೂರದಲ್ಲಿ ಕಂಡರು ಮೂವರು T.C.ಗಳು. ತಕ್ಷಣ ಅರಿವಾಯ್ತು ನನ್ನ ಬಳಿ ಕೇವಲ ಮಾಮೂಲಿ ರೈಲಿನ ಟಿಕೆಟ್ ಇತ್ತು. ಮುಂದೇನಾಗಬಹುದೋ ಅದರ ಅರಿವಾಯ್ತು. ನನಗೆ (fine) ದಂಡ ತೆರಬೇಕಾದ್ರೆ ಸರಿ. ಆದರೆ ಬೇರೆ ತರ ಅವಮಾನಿಸಿದರೆ ಹೇಗೆ ಅಂತ ಯೋಚಿಸಿ ಬೆವರಿದೆ. ಪಕ್ಕದ ವ್ಯಕ್ತಿ ಅಪರಿಚಿತನಾದರೂ ನನ್ನ ಕಷ್ಟ ಹೇಳಿಕೊಂಡೆ. ಚಿಂತಿಸಬೇಡಿ ಅಂತ ಹೇಳುತ್ತಾ ತನ್ನ mobile ತೆಗೆದ. ಅಷ್ಟರಲ್ಲಿ T.C. ಬಂದಾಗಿತ್ತು. ಇವನು mobileನಲ್ಲಿ ಟಿಕೆಟ್ ತೋರಿಸಿಯಾಗಿತ್ತು. ನನಗೇನೂ ಅರ್ಥವಾಗಲಿಲ್ಲ. ಆ ಮನುಷ್ಯ ಹಿಂದಿನ ದಿನ ಹೆಂಡತಿ ಜೊತೆಗೆ ಬೋರಿವಲಿಗೆ ಬಂದಿದ್ದನಂತೆ. ಹಾಗಾಗಿ retrun ticket ಸಹಾ ಇತ್ತು. ಆದ್ರೆ ಹೆಂಡತಿ ಅಲ್ಲೇ ಉಳಿದು ಇವನೊಬ್ಬ ಮಾತ್ರ ವಾಪಸ್ಸು ಬಂದ ಕಾರಣ ಅವಳ ಟಿಕೆಟ್ ನನ್ನ ಸಹಾಯಕ್ಕೆ ಬಂತು.

ಇದನ್ನೇ ನಾನನ್ನುವುದು. ಶ್ರದ್ಧೆ, ನಂಬಿಕೆಯಿದ್ದರೆ ಪರಿಸ್ಥಿತಿ ಎಂತದೇ ಇರಲಿ ಆ ದೇವರು ಯಾರ ಮೂಲಕವೋ ನಮ್ಮ ಸಹಾಯಕ್ಕೆ ಒದಗುತ್ತಾನೆ. ಅಂಧೇರಿಯಲ್ಲಿ ಇಳಿದು ಹೋದ ಆ ಮಹಾನುಭಾವನನ್ನು ನಾನೆಂದಿಗೂ ಮರೆಯುವುದಿಲ್ಲ. ಈ ಮಧ್ಯ ನನ್ನ ಮಗಳಿಗೆ ಫೋನ್ ಮಾಡಿದೆ. 2 ನಿಮಿಷಗಳಲ್ಲಿ ನನ್ನ ದಾದರ್ ಟಿಕೆಟ್ ಬಂದಿತ್ತು. ಒಂದು ರೀತಿಯಲ್ಲಿ ಮಗಳೇ ಆದರೂ ಅವಳೂ ದೇವದೂತಳೇ.

**– ರಾಜೇಶ್ವರಿ ಗೋಪಾಲಕೃಷ್ಣ**

**'ರಿಯರ್ ಹೀರೋ'** *(ಪುಟ 3ರಿಂದ)*

ರಜಾ ದಿನಗಳಲ್ಲಿ ಅಜ್ಜಿ–ಅಜ್ಜಂದಿರ ಬಳಿ ಕಾಲ ಕಳೆಯುವಂತೆ ಮಾಡಿ. ಆಗಾಗ್ಗೆ ಸಂಬಂಧಗಳ ಬೆಲೆ ತಿಳಿಸಿಕೊಡಿ. ಬಾವಿಯೊಳಗಿರುವ ಕಪ್ಪೆಗೆ ಅದೇ ತನ್ನ ಪ್ರಪಂಚವಾಗಿರುತ್ತದೆ ಹಾಗೆ ಯಾವತ್ತೂ ಮಕ್ಕಳನ್ನು ಬೆಳೆಸಬೇಡಿ. ಮಕ್ಕಳ ಭಾವನೆಗಳನ್ನು ಕಟ್ಟಿಹಾಕಬೇಡಿ, ಹರಿವ ನದಿಯಂತೆ ನಿರಾಳವಾಗಿ ಹೊರಹೋಗುವಂತೆ ಅವಕಾಶಗಳನ್ನು ಕಲ್ಪಿಸಿಕೊಡಿ. ಆಗ ನಿಮ್ಮ ಮಕ್ಕಳು ತಮ್ಮ ಜೀವನದುದ್ದಕ್ಕೂ ನೀವೇ ನಮ್ಮ ಬದುಕಿನ 'ರಿಯರ್ ಹೀರೋ' ಅಂತ ಭಾವಿಸಿ, ನೀವು ಹಾಕಿಕೊಟ್ಟ ಮಾರ್ಗದರ್ಶನವನ್ನು ತಮ್ಮಲ್ಲಿ ಅಳವಡಿಕೊಳ್ಳುತ್ತಾರೆ.

ಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸುವುದರಲ್ಲೇ ಒಂದು ಕಿಕ್ ಇರುತ್ತೆ. ಹೇಡಿಯಂತೆ ಬೆನ್ನು ತೋರಿ ಓಡಿ ಹೋಗುವುದರಲ್ಲಿ ಏನೂ ಸಿಗುವುದಿಲ್ಲ. ಇನ್ನು ಜೀವನದಲ್ಲಿ ಕೆಲವೊಂದು ಸಮಸ್ಯೆಗಳಿಗೆ ಕಾಲವೇ ಉತ್ತರಿಸುತ್ತದೆ. ಯಾವಾಗ ಕಾಲ ಈ ಸವಾಲುಗಳಿಗೆ ಉತ್ತರಿಸುವುದಕ್ಕೆ ನಿಲ್ಲುತ್ತೋ, ಆಗ ಅದರ ಪರಿಣಾಮ ಅದ್ಭುತವಾಗಿರುತ್ತದೆ. ●

# ವಿಜ್ಞಾನ... ವಿಸ್ಮಯ... ಪರಿಸರ...
# ಮನೆಯೊಳಗೊಂದು ಗಿಡವ ಬೆಳೆಸಿ...



✍ ಎಚ್. ಎ. ಪುರುಷೋತ್ತಮ ರಾವ್
9972339974

ಸಾವಿರಾರು ರೂಪಾಯಿಗಳನ್ನು ತೆತ್ತು ನಾವು ಏರ್ ಕಂಡಿಷನ್‌ಗಳನ್ನು ಮನೆಗೆ ಅಳವಡಿಸಿಕೊಳ್ಳುತ್ತಿದ್ದೇವೆ. ಈಗಂತೂ ಇವು ಅವಶ್ಯಕವೋ ಇಲ್ಲವೇ ಪ್ರತಿಷ್ಠೆಯೋ ತಿಳಿಯದ ಸ್ಥಿತಿ ತಲುಪಿದ್ದೇವೆ. ಒಂದು ಅಂದಾಜಿನಂತೆ ಭಾರತದಲ್ಲಿ 2024 ರಲ್ಲಿ 93 ಮಿಲಿಯನ್ ಎಸಿಗಳು ಮಾರಾಟವಾಗಿದೆಯಂತೆ. 2030 ರ ವೇಳೆಗೆ ಇದು 240 ಮಿಲಿಯನ್ ತಲಪುವ ಸಾಧ್ಯತೆಯಿದೆ ಎನ್ನಲಾಗಿದೆ! ಆದರೆ ಈಗೀಗ ಈ ಹಪಾಹಪಿಗೆ ಒಂದು ಪರಿಹಾರವನ್ನೂ ಹುಡುಕಲಾಗಿದೆ. ಅಂದರೆ ಮನೆಯ ಕೋಣೆಗಳಲ್ಲಿ ಬೆಳೆಸಿ ಪೋಷಿಸಬಹುದಾದ ಒಳಾಂಗಣ ಗಿಡಗಳು ಏರ್ ಕಂಡೀಷನರ್‌ಗಳಿಗಿಂತಲೂ ಮಿಗಿಲಾದುದು ಎಂಬ ಅರಿವು ನಮಗೆ ಈಗೀಗ ಉಂಟಾಗುತ್ತಿದೆ.



ಮನೆಯ ಕೋಣೆಗಳಲ್ಲಿ ಗಿಡಗಳನ್ನು ಪೋಷಿಸುವ ಪದ್ಧತಿ ಗ್ರೀಕರಿಂದಲೇ ಆರಂಭವಾಗಿದೆ ಎಂಬುದು ಇತಿಹಾಸ, ಈಜಿಪ್ತಿಯನ್ನರೂ ಸಹ ಮೂರನೇ ಶತಮಾನದಲ್ಲಿ ಈ ರೀತಿ ಸಸಿ ಬೆಳೆಸಿದ ಬಗ್ಗೆ ಉಲ್ಲೇಖಗಳಿವೆ. ಅವರು ಕುಂಡ ಕೃಷಿ, ಉದ್ಯಾನ ವನಗಳಿಗೆ ಹೆಚ್ಚು ಆದ್ಯತೆ ನೀಡಿದ್ದಾರೆ. ಈಜಿಪ್ಷಿಯನ್ ವೈದ್ಯರು ಮಾನಸಿಕ ಅಸ್ವಸ್ಥ ರೋಗಿಗಳಿಗೆ ಗಿಡಗಳ ಸನಿಹದ ಗಾಳಿ ಸೇವನೆಯನ್ನೆ ಒಂದು ಚಿಕಿತ್ಸೆಯಾಗಿ ಪರಿಗಣಿಸಿದ್ದಾರೆ. ಗಿಡಮರಗಳು ಭೂ ವಾತಾವರಣದ ಶ್ವಾಸಕೋಶಗಳಷ್ಟೇ ಅಲ್ಲದೆ ಮಲಿನಕಾರಕ ವಿಷಗಳನ್ನು ತೆಗೆಯುವ ಮೂತ್ರಪಿಂಡಗಳೂ ಹೌದು ಎಂಬ ವೈಜ್ಞಾನಿಕ ಅಂಶವೇ ಕೋಣೆಯೊಂದರಲ್ಲಿ ಮನುಷ್ಯ ಮತ್ತು ಸಸ್ಯಗಳ ನಡುವೆ ಇರುವ ಸಾವಯವ ಸಂಬಂಧ, ಪರಿಣಾಮ ಕುರಿತಂತೆ ಅನೇಕ ಹೊಸ ಅಧ್ಯಯನಗಳ ಸೃಷ್ಟಿಗೆ ಕಾರಣವಾಗಿದೆ. ಕೆಲವೊಂದು ಸಸ್ಯಗಳ ಸನಿಹ ಮಾತ್ರದಿಂದಲೇ ಮನುಷ್ಯನ ರಕ್ತದೊತ್ತಡ, ಮಾನಸಿಕ ಒತ್ತಡಗಳು ನಿವಾರಣೆಯಾಗುವುದಿದ್ದು ಉಲ್ಲಾಸ, ಆರೋಗ್ಯ ಹೆಚ್ಚಬಲ್ಲುದು ಎಂಬ ಅಂಶ ತೋಟಗಾರಿಕಾ ಚಿಕಿತ್ಸೆ (horticultural therapy) ಎಂಬ ವಿಶೇಷ ಅಧ್ಯಯನ ಶಿಸ್ತನ್ನೇ ರೂಪಿಸಿದೆ.

ವಿಶ್ವದ ಅಭಿವೃದ್ಧಿ ಹೊಂದಿದ ಬಹುತೇಕ ರಾಷ್ಟ್ರಗಳಲ್ಲಿನ ಶೇ.90ರಷ್ಟು ಜನ ತಮ್ಮ ಸಮಯವನ್ನು ನಾಲ್ಕು ಗೋಡೆಗಳ ನಡುವೆಯೇ ಕಳೆಯುತ್ತಾರೆ. ಇದು ಅಭಿವೃದ್ಧಿ ಶೀಲ ರಾಷ್ಟ್ರಗಳಿಗೂ ಅನ್ವಯಿಸುವುದುಂಟು. ಇಂದು ವೈವಿಧ್ಯಮಯ ವಿನ್ಯಾಸ ತಾಂತ್ರಿಕ ಅನುಕೂಲಗಳು, ಸಾಮಾಜಿಕ ಪ್ರತಿಷ್ಠೆಯ ಹಿನ್ನೆಲೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಮನೆ ಕಟ್ಟಡಗಳ ಕೋಣೆಗಳ ಒಳಗೂ ಸಸಿ ಬೆಳೆಸಿ ಪೋಷಿಸುವ ಈ ವಿಶಿಷ್ಟ ಜೈವಿಕ ತಂತ್ರಜ್ಞಾನದ ಅರಿವು ಅಗತ್ಯವಾಗಿದೆ.

**ಆರೋಗ್ಯದ ಮೇಲೆ ತೀವ್ರ ಪರಿಣಾಮ**

ಜೋಸೆಫ್ ಪ್ರೀಸ್ಟ್ 1772ರಲ್ಲಿ ಸಸ್ಯಗಳು ಗಾಳಿಯನ್ನು ಶುದ್ಧಗೊಳಿಸುತ್ತವೆ ಎಂಬ ಅಂಶವನ್ನು ಕಂಡು ಹಿಡಿದ. ನಾಸಾ 1969 ರಲ್ಲೇ ಚಂದ್ರಯಾನಕ್ಕೆ ಕಳುಹಿಸಿದ್ದ ಅಂತರಿಕ್ಷ ಪ್ರಯೋಗಶಾಲೆಯಲ್ಲಿ ಪ್ರೋಮಯಾನಿಗಳ ಸುರಕ್ಷತೆ ಕುರಿತು ಕೈಗೊಂಡ ಸಂಶೋಧನೆಗಳಲ್ಲಿ ಸಸ್ಯಗಳು ಹಾಗೂ ಸೂಕ್ತ ಜೀವಿಗಳು ಅವರ ದೇಹದ ಮೇಲೆ ಯಾವ ಪ್ರಭಾವ ಬೀರುತ್ತವೆ. ಹೇಗೆ ಪ್ರತಿಕ್ರಿಯಿಸುತ್ತವೆ ಎಂಬ ಬಗ್ಗೆ ಅಧ್ಯಯನ ನಡೆಸಿತ್ತು. 1973ರಲ್ಲಿ ಸೈಲಾಬ್–ತ್ನನ್ನು ಕಳುಹಿಸಿದ ಸಂದರ್ಭದಲ್ಲೂ ಆದು ಈ ಕುರಿತ ಅನೇಕ ಸಂಶೋಧನೆಗಳನ್ನು ನಡೆಸಿತ್ತು. ಹೀಗಾಗಿ ನಾಸಾದ ವಿಜ್ಞಾನಿಗಳು ಆಗಿನಿಂದಲೇ ಇಂಥಹ ಸಂಶೋಧನೆಗಳನ್ನು ನಡೆಸಿ ಈ ವಿಶಿಷ್ಟ ಜ್ಞಾನದ ಬೆಳವಣಿಗೆಗೆ ನಾಂದಿ ಹಾಡಿದ್ದಾರೆ. ಅಮೆರಿಕದ ಪ್ರತಿಷ್ಠಿತ ಪರಿಸರ ಸಂರಕ್ಷಣಾ ಏಜೆನ್ಸಿ (EPA) 1989ರಲ್ಲಿ ಪ್ರಯೋಗಿಕವಾಗಿ ಅಲ್ಲಿನ ಅನೇಕ ಸರ್ಕಾರಿ ಕಛೇರಿಗಳು, ಶಾಲೆಗಳು, ಆಯ್ದ ವಾಸಗೃಹಗಳು, ಆಸ್ಪತ್ರೆಗಳು, ನರ್ಸಿಂಗ್ ಹೋಮಗಳು ಇತ್ಯಾದಿ ಕಟ್ಟಡಗಳ ಕೋಣೆಗಳ ಒಳಗಿನ ವಾಯುವಿನ ಗುಣಮಟ್ಟ ಅಳೆಯುವ ಅಧ್ಯಯನ ನಡೆಸಿ ಒಂದು ವರದಿಯನ್ನು ಸಲ್ಲಿಸಿತ್ತು. ಈ ವರದಿಯ ಪ್ರಕಾರ ಆ ಕೋಣೆಗಳಲ್ಲಿನ ವಾಯುವಿನಲ್ಲಿ 900ಕ್ಕೂ ಹೆಚ್ಚು ಬಗೆಯ ಬಾಷ್ಪಶೀಲ ಸಾವಯವ ರಾಸಾಯನಿಕ ಗಳಿದ್ದವು. ಅದರಲ್ಲೂ ಮಲಗುವ ಕೋಣೆಗಳಲ್ಲಿನ ವಾಯುವಿನಲ್ಲಿ ಅಧಿಕ ಪ್ರಮಾಣದ ವಿಷಾನಿಲಗಳು ಇದ್ದವು. ಇವು ಆ ಕೋಣೆಗಳಲ್ಲಿ ವಾಸಿಸುವ ಮಂದಿಯ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುವ ಬಗ್ಗೆ ವರದಿ ಸ್ಪಷ್ಟವಾಗಿ ಉಲ್ಲೇಖಿಸಿತ್ತು. ಈ ಕಾರಣ ದಿಂದಾಗಿಯೇ ಸಂಸ್ಥೆ ಈ ಬಗೆಯ ಪರಿಸರ ಮಾಲಿನ್ಯವನ್ನು ವಿಶ್ವ ಐದು ಪ್ರಮುಖ ಆಪಾಯಕಾರಿ ಮಾಲಿನ್ಯಗಳ ಗುಂಪಿಗೆ ಸೇರಿಸಿತು.

**ವಿಷಕಾರಿ ರಾಸಾಯನಿಕ ಅನಿಲ**

ಸಾಮಾಜಿಕ ಪ್ರತಿಷ್ಠೆಗೆ ಅನುಗುಣವಾಗಿ ನಿರ್ಮಾಣವಾಗುವ ಕಟ್ಟಡಗಳಲ್ಲಿ ಫೈವುಡ್, ಫೈಬರ್ ಬೋರ್ಡ್, ಬಣ್ಣಗಳು, ವಾರ್ನಿಷ್, ಅಂಟು, ಪೇಪರ್ ಹಾಗೂ ಇತರೆ ಸಿಂಥೆಟಿಕ್ ಸಾಮಗ್ರಿಗಳು ಧಾರಾಳವಾಗಿ ಬಳಕೆಯಾಗುತ್ತವೆ. ಜತೆಗೆ ಗೃಹಾಲಂಕಾರಕ್ಕೆ ವೈವಿಧ್ಯಮಯ ಪೀಠೋಪಕರಣ, ಬಟ್ಟೆ ಇತ್ಯಾದಿಗಳು ಸೇರುತ್ತವೆ. ಆದರೆ ಇವೆಲ್ಲ ಫಾರ್ಮಾಲ್ಡಿಹೈಡ್ ಎಂಬ ವಿಷಕಾರಿ ರಾಸಾಯನಿಕ ಅನಿಲವನ್ನು ಸತತವಾಗಿ ಬಿಡುಗಡೆ ಮಾಡುತ್ತದೆ. ಜತೆಗೆ ಇದರಲ್ಲಿ ಬೆನ್, ಕೈಲಿನ್, ಟ್ರೈಕ್ಲೋರೋ ಈಥೇನ್, ಈಥೈಲ್ ಟಾಲೀನ್ ಮುಂತಾದ ಇತರ ವಿಷ ಸಂಯುಕ್ತಗಳೂ ಸೇರಿರುತ್ತವೆ ಎಂದು ವಿಜ್ಞಾನಿಗಳು ದೃಢಪಡಿಸಿದ್ದಾರೆ. ಬೆಚ್ಚಗಿನ ಈ ಮನೆಗಳಲ್ಲಿ ಅದರಲ್ಲೂ ಛಳಿಗಾಲದಲ್ಲಿ ಗಾಳಿಯ ಸಾಪೇಕ್ಷ ಆದ್ರತೆ ತೀರಾ ಕಡಿಮೆ ಯಾಗುತ್ತದೆ. ಅದೇ ರೀತಿ ಒಳಾವರಣದಲ್ಲಿ ಉಷ್ಣ ಹೆಚ್ಚಿದಂತೆ ತೇವಾಂಶ ಕಡಿದು ಯಾಗುತ್ತದೆ. ಇದರಿಂದಾಗಿ ಮೂಗಿನ ಒಳಾವರಣದ ಶ್ರೇಷ್ಠ ಒಣಗಿ ವೈರಸ್ಸುಗಳು ಸುಲಭವಾಗಿ ಶ್ವಾಸಕೋಶ ಸೇರುತ್ತದೆ. ಇವು ಕಣ್ಣುಗಳಲ್ಲಿ ನೀರು ಸುರಿಯುವುದು, ಮೂಗು, ಗಂಟಲಲ್ಲಿ ಉರಿ, ತೀವ್ರ ತಲೆ ನೋವು, ಸುಸ್ತು ಹಾಗು ಅಸ್ತಮಾಗೂ ದಾರಿ ಮಾಡಿಕೊಡುತ್ತದೆ ಎಂದು ವಿವರಿಸಿದ್ದಾರೆ. ವಾಸ್ತವವಾಗಿ ದಶಕಗಳ ಹಿಂದೆಯೇ ವಿಶ್ವ ಆರೋಗ್ಯ ಸಂಸ್ಥೆ ನಿರ್ಧರಿಸಿರುವ ಮಾನದಂಡದಂತೆ ಫಾರ್ಮಾಲಿಡಿಹೈಡ್ ಮನೆಯ ಕೋಣೆಯೊಳಗೆ 0.05 ಪಿಪಿಎಂ ಪ್ರಮಾಣಕ್ಕಿಂತ ಹೆಚ್ಚಿಗೆ ಇರುವುದು ಆಪಾಯಕರ. ಈ ಪ್ರಮಾಣ ಮೀರಿದಲ್ಲಿ ಉಸಿರಾಟಕ್ಕೂ ತೊಂದರೆಯಾಗಿ ಜೀವಕ್ಕೆ ಅಪಾಯವಾಗುವ ಸಾಧ್ಯತೆಗಳಿವೆ.

ಇಂದು ಅವ್ಯಾಹತವಾಗಿ ಬಳಸಲಾಗುತ್ತಿರುವ ಏರ್‌ಕಂಡೀಷನರ್‌ಗಳು ಹೊರಗಿನ ಗಾಳಿಯನ್ನು ಮನೆಯೊಳಕ್ಕೆ ಸೇರಿಸಿ ಒಳಗಿನ ಗಾಳಿಗೆ ಮಿಶ್ರ ಮಾಡಿ ಒಳವಾಯುವಿನ ಗುಣಮಟ್ಟ ಹೆಚ್ಚಿಸುವ ಕೆಲಸ ಮಾಡುತ್ತದೆ. ಹೊರಗಿನ ಗಾಳಿ ಶುದ್ಧವಾದುದು ಎಂಬುದು ನಮ್ಮ ಸಾಮಾನ್ಯ ನಂಬಿಕೆ. ಆದರೆ ಕಲುಷಿತ ನಗರಗಳು, ಆದರಲ್ಲೂ ಕೈಗಾರಿಕಾ ಪ್ರದೇಶಗಳ ವ್ಯಾಪ್ತಿಯಲ್ಲಿ ವಾತಾವರಣದ ಗಾಳಿಯಲ್ಲೇ ಅನೇಕ ವಿಷಾನಿಲಗಳು ಸೇರಿರಬಹುದು. ಅಲ್ಲದೆ ಏರ್ ಕಂಡೀಷನರ್‌ಗಳಲ್ಲಿನ ಪಟುಕೃತ ಕಾರ್ಬನ್ ಫಿಲ್ಟರ್‌ಗಳು ತನ್ನ ಸರಂದಿ ಗುಣದಿಂದಾಗಿ ಅನೇಕ ರಾಸಾಯನಿಕ ವಿಷಗಳನ್ನು ಹೀರಿಕೊಳ್ಳಬಲ್ಲ ಸಾಮರ್ಥ್ಯ ಹೊಂದಿದ್ದರೂ ಕೂಡ ಅವುಗಳನ್ನು ಸಂಪೂರ್ಣವಾಗಿ ನಾಶ ಪಡಿಸಲಾರವು. ಒಮ್ಮೆ ಫಿಲ್ಟರ್‌ಗಳು ಭರ್ತಿ ಯಾದಲ್ಲಿ ಅದರ ಹೀರುವಿಕೆಯ ಸಾಮರ್ಥ್ಯವೂ ಕುಗ್ಗಿ ಇನ್ನಷ್ಟು ವಿಷ ಅನಿಲಗಳು ಕೋಣೆಗಳ ಒಳಗಿನ ವಾಯುವನ್ನು ಸೇರುವ ಸಾಧ್ಯತೆಗಳೂ ಇವೆ. ಇಂದು ನಮಗೆ ಸುಮಾರು 80,000ಕ್ಕೂ ಹೆಚ್ಚು ಸಿಂಥೆಟಿಕ್ ರಾಸಾಯನಿಕಗಳ ಬಗ್ಗೆ ತಿಳಿದಿದೆಯಾದರೂ ಬಹಳಷ್ಟು ರಾಸಾಯನಿಕ ಗಳಲ್ಲಿನ ವಿಷದ ಪ್ರಮಾಣ ಹಾಗೂ ಅದರ ರಚನೆ ಕುರಿತ ವಿವರಗಳು ನಿಖರವಾಗಿ ತಿಳಿದಿಲ್ಲ. ಹೀಗಾಗಿ ಅವು ಹೊರಸೂಸಬಲ್ಲ ವಿಷಗಳು ನಮ್ಮ ಆರೋಗ್ಯದ ಮೇಲೆ ಉಂಟು ಮಾಡುವ ವ್ಯತಿರಿಕ್ತ ದುಷ್ಪರಿಣಾಮಗಳು ಮಾತ್ರ ಖಚಿತವಾಗಿರುತ್ತದೆ.

ಮನೆಯೊಳಗಿನ ವಾಯುವನ್ನು ವಿಷಮಯವಾಗಿರುವ ಇನ್ನೂ ಅನೇಕ ಬಗೆಯ ಜೈವಿಕ ಮಲಿನಕಾರಕಗಳೂ ಇವೆ. ಬ್ಯಾಕ್ಟೀರಿಯ, ವೈರಸ್, ಜಿರಳೆ, ಸಾಕು ಪ್ರಾಣಿಗಳ ರೋಮ ಗಳು, ಶಿಲೀಂದ್ರಗಳು, ಬೂಷ್ಟು, ಇತ್ಯಾದಿಗಳು ಸಹ ಕೋಣೆಯ ವಾತಾವರಣದಲ್ಲಿ ರಾಸಾಯನಿಕ ವಿಘಟನೆ ಹೊಂದಿ ಅನೇಕ ವಿಷ ವಸ್ತುಗಳನ್ನು ವಾಯುವಿಗೆ ಸೇರಿಸುವುದುಂಟು. ಮನೆಯೊಳಗೆ ಬಳಸುವ ಆನೇಕ ಕ್ರಿಮಿನಾಶಕ ಗಳಿಂದಾಗಿ ಬೆಳೆಯುವ ಮಕ್ಕಳ ಮಿದುಳಿನಲ್ಲಿ ಗೆಡ್ಡೆ ಬೆಳೆಯುವ ಸಾಧ್ಯತೆಯಿದೆ. ಇಟಲಿಯ ಸಂಸ್ಥೆಯೊಂದು ನಡೆಸಿದ ಅಧ್ಯಯನವೊಂದರಲ್ಲಿ ಪೆಟ್ರೋಲಿಯಂ ಮೂಲದ ಬಣ್ಣಗಳು, ಅಂಟು ಗಳ ಬಳಕೆ ಪಾರ್ಕಿನ್ಸನ್ ರೋಗ ಹೆಚ್ಚಿಲು ಪ್ರೇರಕವಾಗಬಲ್ಲುದೆಂದು ಉಲ್ಲೇಖಿಸಲಾಗಿದೆ.

**ಸಸ್ಯಗಳ ದ್ಯುತಿ ಸಂಶ್ಲೇಷಣೆ**

ಈ ಎಲ್ಲ ಸಮಸ್ಯೆಗಳಿಗೆ ಸಸ್ಯಗಳು ಮಾತ್ರವೇ ತಕ್ಕ ಪರಿಹಾರ ನೀಡಬಲ್ಲವು ಎಂಬುದು ವಿಜ್ಞಾನಿಗಳ ಅಭಿಪ್ರಾಯ, ಸಸ್ಯಗಳು ದ್ಯುತಿ ಸಂಶ್ಲೇಷಣೆ ಮೂಲಕ ಉತ್ಪಾದಿಸುವ ಜೈವಿಕ ರಾಶಿ ಅಗಾಧ ಪ್ರಮಾಣದಲ್ಲಿ ಆಮ್ಲಜನಕವನ್ನು ವಾತಾವರಣಕ್ಕೆ ಸೇರಿಸುವುದಲ್ಲದೆ ಅದರಿಂದ ಕಾರ್ಬನ್ ಡೈಆಕೈಡನ್ನು ತೆಗೆಯುತ್ತದೆ. ಅಲ್ಲದೆ ಸಸ್ಯಗಳಲ್ಲಿನ ಭಾಷ ವಿಸರ್ಜನೆ ಪ್ರಕ್ರಿಯೆಯಲ್ಲಿ ಉಂಟಾಗುವ ಸಂವಹನ ಪ್ರವಾಹದಿಂದ (Convection Current) ನೀರಿನ ಅಣುಗಳು ಬೇರುಗಳಿಂದ ಎಲೆಗಳವರೆಗೆ ಸತತವಾಗಿ ಮೇಲೇರುವ ಜತೆಜತೆಗೆ, ಅಲ್ಪ ಪ್ರಮಾಣದ ವಾಯು ಮೇಲಿನ ಎಲೆಗಳಿಂದ ಕೆಳಗಿನ ಬೇರು ಸಮೂಹದ ಕಡೆಗೆ ಸೆಳೆಯಲ್ಪಡುತ್ತದೆ. ಕೆಳಗಿಳಿಯುವ ಈ ವಾಯುವಿನಲ್ಲಿ ಆಮ್ಲಜನಕ, ಸಾರಜನಕ ಮುಂತಾದ ಅನಿಲಗಳೇ ಅಲ್ಲದೆ ಕೆಲವೊಂದು ಮಲಿನಕಾರಕ ವಿಷಕಾರಿ ರಾಸಾಯನಿಕಗಳೂ ಸೇರಿದ್ದು ಅವೂ ಬೇರುಗಳನ್ನು ಸೇರುತ್ತವೆ. ಬೇರು ಸಮೂಹದಲ್ಲಿರುವ ಸೂಕ್ಷ್ಮಾಣುಗಳು ಈ ವಾರಕ ಸ0ಯುಕ್ತಗಳನ್ನು ವಿಘಟನೆಗೊಳಿಸಿ ಸಂಪೂರ್ಣವಾಗಿ ನಾಶಪಡಿಸುತ್ತವೆ ಎಂದು ಸಂಶೋಧನೆಗಳು ತಿಳಿಸಿವೆ. ಹೀಗಾಗಿ ಸಸ್ಯಗಳಿಗೆ ವಿಷಾನಿಲಗಳನ್ನು ಸಂಪೂರ್ಣವಾಗಿ ನಾಶಪಡಿಸಬಲ್ಲ ಸಾಮರ್ಥ್ಯ ವಿದೆ ಎಂಬುದು ಅರ್ಥವಾಗುತ್ತದೆ. ಇಷ್ಟೇ ಅಲ್ಲದೆ ಗಿಡಗಳು ಕೋಣೆಯೊಂದರಲ್ಲಿ ಶೇಕಡ 20ರಷ್ಟು ಸೂಕ್ತ ಧೂಳನ್ನು ಕಡಿಮೆ ಮಾಡುತ್ತದೆ ಎಂಬ ಅಂಶವೂ ತಿಳಿದಿದೆ. ಆದರೆ ಈ ಹೀರುವಿಕೆ ಕುರಿತಂತೆ ಗಿಡಗಳಲ್ಲಿ ಯಾವ ನಿರ್ದಿಷ್ಟ ತಾಂತ್ರಿಕ ಪ್ರಕ್ರಿಯೆ ನಡೆಯುತ್ತದೆ ಎಂಬುದು ಸ್ಪಷ್ಟವಾಗಿಲ್ಲವಾದರೂ ಸಸ್ಯಗಳು ಹೊರ ಸೂಸುವ ಋಣ ಅಯಾನುಗಳು ಈ ಧೂಳಿನ ಪದಾರ್ಥಗಳನ್ನು ಆಕರ್ಷಿಸಿರಬಹುದೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

**ಕೋಣೆಗಳ ಪೋಷಿಸುವ ಪರಿಪಾಠ**

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೋಣೆಗಳ ಒಳಗೆ ಗಿಡ ಬೆಳೆಸಿ ಪೋಷಿಸುವ ಪರಿಪಾಠ ವ್ಯಾಪಕವಾಗಿದೆ. ಮನೆಗಳು, ಕಛೇರಿಗಳು ಆಸ್ಪತ್ರೆಗಳು, ಇತ್ಯಾದಿ ಕೋಣೆಗಳ ಒಳಗೆ ಒಳಾಂಗಣಕ್ಕೆ ಒಗ್ಗಿ ಬೆಳೆಯುವ ವಿವಿಧ ಬಗೆಯ ಗಿಡಗಳನ್ನು ಪೋಷಿಲಾಗುತ್ತಿದೆ. ನೀರಿನಲ್ಲೇ ಗಿಡಗಳನ್ನು ಬೆಳೆಸುವ ಜನ ಕೃಷಿ ವಿಧಾನಗಳೂ ಇವೆ.

ಆದರೆ ನಮ್ಮಲ್ಲಿ ಈ ಬಗ್ಗೆ ಇನ್ನೂ ಹೆಚ್ಚಿನ ಅರಿವು ಆಗತ್ಯವಿದೆ. ಆದಾಗ್ಯೂ ಕೆಲವೊಂದು ವ್ಯಾಪಾರಿ ಸಂಸ್ಥೆಗಳು ಕೋಣೆಗಳ ಒಳಗೆ ಬೆಳೆಸಬಹುದಾದ ಸ್ಪೈಡರ್ ಗಿಡ, ಲೇಡಿಪಾಮ್, ರಬ್ಬರ್ ಗಿಡ, ಪೀಸ್‌ಲಿಲ್ಲಿ, ಆಲೋವೆರಾ, ಬಿದಿರು ಪಾಮ್, ಹಲವು ಬಗೆಯ ಆರ್ಕಿಡ್‌ಗಳು ಫರ್ನ್ ಗಿಡಗಳು, ಕ್ರೋಟನ್‌ಗಳು, ಹೀಗೆ ಅನೇಕ ಬಗೆಯ ಗಿಡಗಳನ್ನು ನರ್ಸರಿಗಳಲ್ಲಿ ಬೆಳೆಸಿ ಮಾರಾಟ ಮಾಡುವ ಬಗ್ಗೆ ಒಂದಷ್ಟು ಪ್ರಚಾರ ನಡೆಸಿವೆ. ಆದರೆ ಅವು ಕೇವಲ ನಗರ ಪ್ರದೇಶಗಳಲ್ಲಿ ಅದರಲ್ಲೂ ಶ್ರೀಮಂತ ವರ್ಗದ ಮನೆಗಳನ್ನು ಮಾತ್ರ ತಲುಪಲು ಸಾಧ್ಯವಾಗಿದೆ.

ಕೆಲವೊಂದು ಸ್ಥಳಗಳಲ್ಲಿ ಈ ಬಗೆಯ ಗಿಡಗಳು ಕಂಡುಬರುವುದಾದರೂ ಅದರ ಉಪಯುಕ್ತತೆ ಕುರಿತು ಯಾರಿಗೂ ನಿಖರ ಮಾಹಿತಿಯಿಲ್ಲ. ಇದಕ್ಕೆ ಒಂದು ಸಾಮಾನ್ಯ ಉದಾಹರಣೆ ಎಂದರೆ ನಮ್ಮ ಹೇರ್ ಕಟ್ಟಿಂಗ್ ಸಲೂನ್‌ಗಳಲ್ಲಿ ಬೆಳೆಸುವ ರಬ್ಬರ್ ಗಿಡಗಳು, ಎಷ್ಟೇ ಆದರೂ ಇವು ಹಸಿರು ಸಸ್ಯಗಳೇ ಆದ್ದರಿಂದ ಒಂದು ವಾರಕ್ಕೊಮ್ಮೆಯಾದರೂ ಈ ಗಿಡಗಳನ್ನು ಹೊರತೆಗೆದು ಒಂದೆರಡು ಘಂಟೆ ಕಾಲ ಅದರ ಎಲೆಗಳ ಮೇಲೆ ಬಿಸಿಲು ಬೀಳುವಂತೆ ನೋಡಿಕೊಂಡಲ್ಲಿ ಗಿಡದ ಉಪ ಯೋಗ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

ಮನೆಗಳ ಒಳಗೆ ಗಿಡಗಳನ್ನು ಬೆಳೆಸುವುದು ನಮ್ಮ ಆರೋಗ್ಯದ ರಕ್ಷಣೆಯಷ್ಟೇ ಅಲ್ಲದೆ ಬೆಳೆಯುವ ಮಕ್ಕಳು ಮತ್ತು ಗಿಡಮರಗಳ ನಡುವೆ ಒಂದು ಮನೋವೈಜ್ಞಾನಿಕ ಸಾವಯವ ಸಂಬಂಧವನ್ನು ಕಲ್ಪಿಸುವ ಸಾಧ್ಯತೆಯಿದೆ. ಈ ಮೂಲಕ ಪುಟ್ಟ ಮಕ್ಕಳು ಮನೆಯಲ್ಲಿ ತಮ್ಮೊಂದಿಗೆ ಬೆಳೆಯುವ ಗಿಡಗಳೊಂದಿಗೆ ಅಧ್ಯಕ್ಷೆ ಪ್ರೀತಿ, ವಾತ್ಸಲ್ಯಗಳನ್ನು ಬೆಳೆಸಿಕೊಳ್ಳಬಹುದು. ಈ ಬೆಳವಣಿಗೆ ಮಕ್ಕಳಲ್ಲಿ ಪರಿಸರ ಪ್ರಜ್ಞೆ ಮೂಡಿಸುವುದೇ ಅಲ್ಲದೆ ಮಾನಸಿಕ ಸಾಮರ್ಥ್ಯವನ್ನೂ ಹೆಚ್ಚಿಸಿ ಒಂದರ್ಥದಲ್ಲಿ ಮನೆಯೊಳಗೆ "ಹಸಿರು ಮನೆ" ತತ್ವಕ್ಕೂ ಪೂರಕವಾದೀತು.

## ಶ್ರೀ ಕೃಷ್ಣನ ಉಪದೇಶಗಳು

**ಮನಸ್ಸಿನಲ್ಲಿ ಭಕ್ತಿ ತುಂಬಿ ತುಳಸಿ ಪತ್ರೆಯನ್ನೂ. ಹೂವನ್ನೋ ಅರ್ಪಿಸಿದರೆ ಅದನ್ನು ಭಗವಂತ ಪ್ರೀತಿಯಿಂದ ಸ್ವೀಕರಿಸುತ್ತಾನೆ ಇಲ್ಲಿ ಬಂಗಾರದ ಪೀಠವಾಗಲೀ, ಬೆಳ್ಳಿಯ ಹರಿವಾಣವಾಗಲಿ, ಪಂಚಪಾತ್ರೆಯಾಗಲೀ ಏನೂ ಬೇಡ.**



# ಅಂದಿನ ನನ್ನ ನೆನಪುಗಳು....

✍ ವನಜಾ ರಾಜನ್

ಆಷಾಢ ಕಳೆದು ಶ್ರಾವಣ ಮಾಸ ಎಂದರಾಯಿತು.... "ಹಬ್ಬಗಳು" ಸಾಲು ಸಾಲು, ದೇವರಿಗೆ ಪೂಜೆ ಪುನಸ್ಕಾರಗಳು.... ಸ್ತೋತ್ರಗಳು, ಮಂಗಳಾರತಿ, ಆದ ಮೇಲೆ ಸಂಪ್ರದಾಯ ಹಾಡುಗಳು... ಅಮ್ಮ ಆರಂಭಿಸುತ್ತಿದ್ದರೂ ನಾವೂ ಸಂಗಡ ಧ್ವನಿ ಕೂಡಿಸುತ್ತಿದ್ದೆವು! ಎಲ್ಲಾ ಮಕ್ಕಳಿಗೂ ಮನೆಯಲ್ಲಿಯೇ ಬಾಯಿಪಾಠವಾಗುತ್ತಿತ್ತು! ಹಿಂದಿನ ದಿನವೇ ಸಡಗರ – ಸಂಭ್ರಮ, ಮನೆ ಮುಂದೆ ಹೊಸಲಿನ ಮೇಲೆ (ಹಿಟ್ಟಿನಲ್ಲಿ) ರಂಗೋಲಿಗಳ ಚಿತ್ರಣ, ಮಾವಿನ ಎಲೆಯ ತೋರಣ, ಮರುದಿನ ತಲೆಗೆ ಸ್ನಾನ ಮಾಡಿ ಹೆಣ್ಣು ಮಕ್ಕಳು (ಲಂಗ–ಧಾವಣಿ) ಗಂಡುಮಕ್ಕಳು, ಹೊಸಬಟ್ಟೆ ಧರಿಸಿ, ದೇವರ ಮನೆಯ ಮುಂದೆ ಕುಳಿತು, "ಅಮ್ಮನು ಮಾಡುತ್ತಿದ್ದ ಪೂಜೆಯನ್ನು ವೀಕ್ಷಿಸುತ್ತಾ ಹಾಡುಗಳನ್ನು ಕೇಳುತ್ತಾ ಕುಳಿತಿರುತ್ತಿದ್ದರೂ, "ಮಂಗಳಾರತಿ ಮುಗಿದ ಮೇಲೆ ಪ್ರಸಾದಕ್ಕಾಗಿ ಕಾದಿರುತ್ತಿದ್ದರು. "ಆರತಿ ತಾ ಕೃಷ್ಣ ಮೂರುತಿಗೆ, ಮೂರುತಿಗೆ ಪಾರ್ಥಸಾರಥಿಗ", "ಆರತಿಯ ಬೆಳಗುವೇ ಮುದದಿ ಶಾರದಾಂಬೆಗೆ ನಾ" ಇತ್ಯಾದಿ (ಯಾರು ರಾಗ ಸಂಯೋಜನೆ ಮಾಡಿದರೋ ಗೊತ್ತಿಲ್ಲ) ಆರತಿಯ ನಂತರ ಅಮ್ಮ ವಿಗ್ರಹಗಳಿಗೆ ಅಲಂಕರಿಸಿದ ಹೂವು ಪ್ರಸಾದ ರೂಪದಲ್ಲಿ ಕಣ್ಣಿಗೆ ಒತ್ತಿಕೊಂಡು ಮುಡಿಯುವಾಗ.... ಕೊಡು –ಕೊಡು ಹೂವನು ತಡವನು ಮಾಡದೆ, ಮುಡಿ–ಜಡೆ ಮೇಲ್ಮುಡಿದಿರುವಂತ ಕುಸುಮವ" (ಅಲ್ಲಿ ಕುಳಿತಿರುವ ಮಕ್ಕಳಿಗೆ ಅರಿವಿದೆ ಪೂಜೆ ಸಮಾಪ್ತಿ ಆಯಿತು. ನಮಗೆ ಈಗ ಪ್ರಸಾದ ಸಿಗುತ್ತದೆ) ಆ ಹಾಡುಗಳನ್ನು ಇಂದು ಪೂಜೆಯಲ್ಲಿ ಹಾಡುವುದು ನನಗೆ ವಾಡಿಕೆಯಾಗಿದೆ. .



ಅಂದಿನ ಸಿನಿಮಾ ಹಾಡುಗಳು ಎಷ್ಟೊಂದು ಅರ್ಥಗರ್ಭಿತವಾಗಿರುತ್ತಿತ್ತು. ಮನಸ್ಸಿನ ಭಾವನೆಗಳು, ಋತುಗಳ ಬಗ್ಗೆ, ಪ್ರಕೃತಿಯಲ್ಲಿ ಆಗುವ ಬದಲಾವಣೆಗಳು, ಮದುವೆ, ಪ್ರೇಮ, ಸುಖ, ಸಂತೋಷದ ಹಾಡುಗಳು ಕಣ್ ಮುಂದೆ ತರುವ ಚಿತ್ರ ಗೀತೆಗಳು ಎಷ್ಟು ಚೆನ್ನ!

ರಾಗ ಸಂಯೋಜನೆಗೆ ಧ್ವನಿಗೂಡಿಸಿದ ಗಾಯಕ – ಗಾಯಕಿಯರನ್ನು ಎಂದೂ ಮರೆಯುವಂತಿಲ್ಲ! ಅಲ್ಲವೇ? ನಾವು ಆಗ್ಗಾಗ್ಗೆ ಇಂದೂ ಹಾಡಿದಾಗ ಆ ಸಿನಿಮಾಗಳ ಹಾಗೂ ನಾಯಕ–ನಾಯಕಿಯರ ನೆನಪು ಮೂಡಿ ಬಂದರೆ ಆಶ್ಚರ್ಯವೇನಿಲ್ಲ! "ಯಾ ಹೂ..... ಯಾ... ಹೂ..... ಇಂದು ಬಾನಿಗೆಲ್ಲಾ ಹಬ್ಬ....., "ಮಂಗಳದ ಈ ಸುದಿನ ಮಧುರವಾಗಲಿ, ನಿನ್ನೊಲುಮೆ ಈ ಮನೆಯ ನಮ್ಮ ದೀಪವಾಗಲಿ (ಚಿತ್ರ: ನಾ ಮೆಚ್ಚಿದ ಹುಡುಗ; ಸಂಗೀತ – ವಿಜಯಭಾಸ್ಕರ್) "ಮನವೇ ಮಂತ್ರಾಲಯ (ಗಾಯಕಿ – ಪ್ರತಿಮಾ ಬೆಳ್ಳೂರು) ತಿರುಪತಿ ವೆಂಕಟ ರಮಣ" ನಿನಗೇತಕೆ ಬಾರದೊ ಕರುಣಾ" , ನಂಬಿದೆ ನಿನ್ನಯ ಚರಣ, ಪರಿಪಾಲಿಸಬೇಕೋ ಕರುಣಾ".

ಎಂದೂ ಮರೆಯಲಾಗದ ಕನ್ನಡ ಚಿತ್ರಗೀತೆಗಳು

1) ನುಡಿಮನ ಶಿವಗುಣ ಸಂಕೀರ್ತನ (ಸಂಗೀತ ನಿರ್ದೇಶನ ಎಸ್. ಎ. ಕರೀಮ್ ಖಾನ್) ಆಫ್ಘಾನಿಸ್ಥಾನದಿಂದ ಬಂದವರು, ಹಾಸನದಲ್ಲಿ ಬೆಳೆದವರು, ಎಲ್ಲರ ಮನೆ ಮನದಲ್ಲಿ ಇಂದಿಗೂ ನೆಲೆ ಕಂಡವರು.

2) ಎಮ್ಮ ಮನೆ ಅಂಗಳದಿ (ವಿ. ಸೀತಾರಾಮಯ್ಯ ಮಗಳನ್ನು, ತವರು ಮನೆಯಿಂದ ಬೀಳ್ಕೊಡುವ ಸಮಯದಲ್ಲಿ ಹಾಡುವಂತಹುದು ಎಂತಹಕಲ್ಲು, ಹೃದಯದವರನ್ನು ಕರಗಿಸುವ ಶಕ್ತಿ ಇರುವ ಪದ್ಯ. (ಈಗಲೂ ಹಾಡುತ್ತಾರೆ)

3) ತನು ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು... ಅಕ್ಕಮಹಾದೇವಿ ವಚನ)

"ಇಂದು ಬಾನಿಗೆಲ್ಲಾ ಹಬ್ಬ" (ವಸಂತ ಋತುವಿನ ವರ್ಣನೆ)

ಪ್ರಕೃತಿಯಲ್ಲಿ ನಾವು ವೀಕ್ಷಿಸುವುದೆಲ್ಲಾ ಸತ್ಯ ನಿತ್ಯ ಸುಂದರ! ಎಲ್ಲಾ ಹಬ್ಬಗಳನ್ನು ಆಚರಿಸುವಾಗ ಪೂಜೆ ಮುಗಿಸಿ ಆರತಿ ಮಾಡುವಾಗ, ಆರತಿ ತಾ ಕೃಷ್ಣ ಮೂರುತಿಗೆ ಪಾರ್ಥಸಾರಥಿಗೆ' ನನ್ನ ನೆನಪಿಗೆ ಬಂದ ಅಂದಿನ ಕೆಲವು ಹಾಡುಗಳನ್ನು ನಮ್ಮೊಡನೆ ಹಂಚಿಕೊಳ್ಳುವ ಕಾತುರದಿಂದ, ಈ ಲೇಖನ ಬರೆಯಬೇಕೆಂದೆನಿಸಿತು... ವಯೋಧರ್ಮ (ನನ್ನ ಬಾಲ್ಯ, ನನ್ನ ತವರುಮನೆ, ಸಂಗೀತ, ಪೂಜೆ ಪುನಸ್ಕಾರಗಳ ನೆನಪು, ನನ್ನನ್ನು ಬಹಳ ದಿನಗಳಿಂದ ಕಾಡಿಸುತ್ತಿತ್ತು. ನಿಮ್ಮೊಡನೆ ಹಂಚಿಕೊಂಡ ಮೇಲೆ ಹಗುರವಾಯಿತು) ●

# ಮಬ್ಬು

(ಉಮಾ ರಾವ್ ಕಥೆಗಳು)

✍ ಉಮಾ ರಾವ್



ಅವಳೇನು ಹಳ್ಳಿ ಹುಡುಗಿಯಲ್ಲ. ಸಣ್ಣ ಊರಿನವಳಷ್ಟೇ. ನೈಟಿ, ನೈಟ್ ಕ್ಲಾಪ್, ನೈಟ್ ಕ್ಲಬ್ಬುಗಳನ್ನು ಟಿವಿಯಲ್ಲಿ ಮಾತ್ರ ಕಂಡು ಅರಿತವಳು. ಅಚ್ಚುಕಟ್ಟಾಗಿ ಅಡುಗೆ ಕೆಲಸ ಕಲಿತವಳು. ಗಂಡ ತಿರುವಾಂಕೂರು, ಪಾಂಡಿಚೇರಿ, ಕೊಯಮತ್ತೂರು ಎಂದೆಲ್ಲಾ ಟೂರ್ ಹೋದಾಗ ರಾತ್ರಿ ಎಲ್ಲಾ ನಿದ್ದೆ ಬರದೆ ಹೊರಳಾಡುವವಳು. ಅವಳು ಮದುವೆಯಾಗಿ ಮೈಸೂರಿಗೆ ಬಂದಾಗ ಇಪ್ಪತ್ತು ವರ್ಷ. ಇವಳನ್ನು ಒಂದು ವರ್ಷ ತವರಿನಲ್ಲಿ ಬಿಟ್ಟು ಅವನು ಟ್ರೈನಿಂಗಾಗಿ ಫಾರಿನ್ನಿಗೆ ಹೋಗಿ ಬಂದಾಗ ಇಪ್ಪತ್ತೊಂದು.

ಅಮೆರಿಕಾದಿಂದ ಮರಳಿ ಬರುವಾಗ ಅವನು ಅವಳಿಗಾಗಿ ಏನೇನೋ ತಂದಿದ್ದ. ಬಣ್ಣಬಣ್ಣದ ಲಿಪ್‌ಸ್ಟಿಕ್ ಗಳು. ಚಂದ ಚಂದದ ಬ್ರಾಗಳು. ಸೂಟ್‌ಕೇಸಿನಡಿ ಅವಿತಿಟ್ಟಿದ್ದ ನೈಟಿ ನೈಟ್ ಕ್ಲಬ್ಬಿನ ಚಿತ್ರಗಳು. ಜೊತೆಗೆ ಒಂದು ತಿಳಿಹಳದಿ ಬಣ್ಣದ ನವಿರಾದ ನೈಟಿ. ಆ ಮುದ್ದೆ ಸೀರೆ ಸುತ್ಕೊಂಡು ಯಾಕೆ ಒದ್ದಾಡ್ತಿದ್ದಿಯ ಹಳ್ಳಿಯೋರಂತೆ. ಹಾಯಂತ ನೈಟ್ ಹಾಕಿ ಮೈಚೆಲ್ಲಿ ಮಲಗು ಎನ್ನುತ್ತಲೇ ಅದನ್ನು ಅವಳ ಕೈಗಿಟ್ಟಾಗ ಅವಳು ನಾಚುತ್ತಲೇ ನೈಟಿ ತೊಟ್ಟು ಮಲಗಿದ್ದಳು. ಸರಿದಾಗಲೆಲ್ಲಾ ಮೈಯಿಂದ ಜಾರುವ ಅದರ ಮುಜುಗರ ಮರೆಯಲು ಪ್ರಯತ್ನಿಸಿದ್ದಳು.

ಆದರೆ ಈಗ ಮೊದಲಿನಂತೆ ಗಂಡ ಟೂರಿಗೆ ಹೋಗುವ ದಿನಗಳು ಬಂದಾಗ ಅವಳಿಗೆ ಬೇಸರವಿಲ್ಲ. ರಾತ್ರಿಯಾಯಿತೆಂದರೆ, ಆ ನೈಟಿ ಮೂಲೆಗೆಸೆದು ಬೀರುವಿನಡಿಯಿಂದ ಮೆತ್ತನೆಯ ಹಳೆಯ ಕೈಮಗ್ಗದ ಸೀರೆಯೊಂದನ್ನು ತೆಗೆದು ಸುತ್ತಿಕೊಳ್ಳುತ್ತಾಳೆ. ಕಣ್ಣುಂಬಾ ನಿದ್ದೆ ಮಾಡುತ್ತಾಳೆ.

ಪ್ರತಿ ಶನಿವಾರ ನಡುರಾತ್ರಿ ಗಂಡ ಮೈ ತುಂಬಾ ಅಪರಿಚಿತ ಗಂಧ ಹೊತ್ತು ಮನೆಗೆ ಬಂದಾಗ, ಅವಳು ಮಂಕಾಗುತ್ತಾಳೆ. ಎಲ್ಲಾ ತಿಳಿದೂ ತಿಳಿಯದಂತೆ ನಟಿಸುತ್ತ ತನ್ನನ್ನು ನೋವಿನಿಂದ ಅಷ್ಟಿಷ್ಟು ರಕ್ಷಿಸಿಕೊಳ್ಳುತ್ತಾಳೆ. ಜೋರಾಗಿ ಮಾತಾಡುತ್ತಾಳೆ. ಒಳಗೇ ಕೊರಗುತ್ತಾಳೆ. ತಾನೆಲ್ಲಿ ತಪ್ಪಿದೆ?

ಎಷ್ಟೆಲ್ಲಾ ಕಲಿತಿದ್ದೇನೆ ಅವನಿಗೋಸ್ಕರ. ಪಂಜಾಬಿ ಅಡುಗೆ ಮಾಡ್ತೇನೆ. ಫೋರ್ಕನಲ್ಲಿ ಪಕೋಡಾ ತಿನ್ನುತ್ತೇನೆ. ಕುಂಕುಮ ಅಳಿಸಿ ಟೀ–ಶರಟು ಜೀನ್ಸಿನಲ್ಲಿ ಅವನ ಆಫೀಸ್ ಪಿಕ್ ನಿಕ್ ಗಳಿಗೆ ಹೋಗಿ ಅಂತಾಕ್ಷರಿ ಹಾಡುತ್ತೇನೆ, ಹೀಗೇಕಾಯಿತು?

ಅವನು ಮಬ್ಬು ಬೆಳಕಿನ ಚೈನೀಸ್ ರೆಸ್ಟೋರೆಂಟಿನಲ್ಲಿ ತೂಗಾಡುವ ಕೆಂಪು ಕಂದೀಲಿನ ದೀಪದ ಕೆಳಗೆ ಕೂತು, ಸೂಪು ಹೀರುತ್ತಾ ಕಿರದು ಕಣ್ಣಿನ ಕೆಂಪು ತುಟಿಯ ಹುಡುಗಿಯ ಕಿವಿಯಲ್ಲಿ ಉಸುರುತ್ತಾನೆ. "ಯೂ ಡೋಂಟ್ ನೋ ಇಂಡಿಯನ್ ವಿಮನ್ ದೇ ಆರ್ ಸೋ ಕನ್ಸರ್ವೇಟಿವ್. ಪ್ರೀತಿ ಮಾಡುವಾಗಲೂ ಪೂರ್ತಿ ಬೆತ್ತಲಾಗಲಾರದು ಅವರು..."

---

## ಮೂಲೆಮನೆ

ಹದಿನೆಂಟು ವರ್ಷಗಳ ಹಿಂದೆ ಶಿಕಾಗೋ ಮಹಾನಗರದ ಒಂದು ಮೂಲೆಯಲ್ಲಿ ಭೇಟಿಯಾದ ನಮ್ಮ ಸ್ನೇಹ ದಿನೇ ದಿನೇ ಗಾಢವಾಗಿತ್ತು. ಆದರೆ ವರ್ಷಗಳ ಈ ಗೆಳೆತನದಲ್ಲಿ ಜಯಾ ಅವಳ ತಂದೆ ಬಗ್ಗೆ ಮಾತಾಡಿದ್ದು ಅದೇ ಮೊದಲ ಬಾರಿ. ಫೋನಿನಲ್ಲಿ, "ನೋಡೇ ನಮ್ಮ ತಂದೆ ತೀರೋದ್ರಂತೆ. ನಾನೀಗಲೇ ಹೊರಡಬೇಕು. ಟಿಕೆಟ್ ಗಾಗಿ ಕಾಯ್ತಿದ್ದೀನಿ" ಎಂದಾಗ ಅವಳ ಧ್ವನಿ ಶಾಂತವಾಗಿಯೇ ಇತ್ತು.

*****

ಜಯಾ ಯಾವಾಗಲೂ "ನಮ್ಮಮ್ಮ ಹೀಗೆ. ನಮ್ಮಮ್ಮ ಹಾಗೆ. ನಮ್ಮಂಗೆ ಮಲ್ಲಿಗೆ ಹೂವೊಂದ್ರೆ ಪ್ರಾಣ. ನಮ್ಮ ಮಾಡೋ ಹಾಗೆ ನಿಪ್ಪಟ್ಟು ಯಾರೂ ಮಾಡಲಾರದು. ಈಗೀಗ ನಮ್ಮಮ್ಮಂಗೆ ಬೆನ್ನು ನೋವು ಜಾಸ್ತಿ ಅಂತೆ. ನೋಡೇ, ಮಹಾ ದೇಶಪ್ರೇಮಿ ನಮ್ಮಮ್ಮ ಶಿಕಾಗೋಗೆ ಬಂದು ಇದ್ಬಿಡೀಂದ್ರೆ ಕೇಳಲ್ಲ..." ಹೀಗೆ. ಮತ್ತೆ ಅಪ್ಪನ ಬಗ್ಗೆ ಎಂದೂ ಇಲ್ಲ. ಪರಿಚಯವಾದ ಮೊದಮೊದಲು ಕೇಳಿದ್ದಿತ್ತು. ಹೀಗೇ ಸಹಜವಾಗಿ. ಅವಳು ಮೌನವಾಗಿ ತಲೆಗ್ಗಿಸಿದ್ದಳಷ್ಟೇ. ಅಂದಿನಿಂದ ನಾನೆಂದೂ ಅವಳ ಅಪ್ಪನ ಬಗ್ಗೆ ಕೇಳಲು ಹೋಗಿರಲಿಲ್ಲ.

*****

"ನಾಳೆಗೆ ಟಿಕೆಟ್ ಸಿಕ್ಕಿದೆ. ನಿನ್ನನ್ನು ನೋಡಬೇಕೆನಿಸಿತು ಬಂದೆ" ಎನ್ನುತ್ತಾ ಇದ್ದಕ್ಕಿದ್ದಂತೆ ಮಧ್ಯಾಹ್ನ ಮನೆಗೆ ಬಂದು ಸೋಫಾ ಮೇಲೆ ಕೂತು. ಎರಡು ಲೋಟ ನೀರು ಕೇಳಿ ಕುಡಿದಳು ಜಯಾ. ನಾನೇನೂ ಕೇಳದೆಯೇ ಮಾತಾಡತೊಡಗಿದಳು.

"ನೋಡು, ಮೊದಲು ನಮ್ಮ ಮನೇನೂ ಎಲ್ಲರ ಮನೆ ಹಾಗೇ ಇತ್ತು. ಊರಿನವರಿಗೆಲ್ಲಾ ನಮ್ಮನೆ ಮೂಲೆ ಮನೆ. ನಾನು ಮೂಲೆಮನೆ ಜಯಾ. ನಮ್ಮಪ್ಪ ಮೂಲೆಮನೆ ಚಂದಪ್ಪ. ಅಮ್ಮ ಮೂಲೆಮನೆ ನಿರ್ಮಲಮ್ಮ. ನನ್ನ ಫ್ರೆಂಡ್ಸ್ ಸ್ಕೂಲಿಗೆ ಹೋಗುವಾಗ ದಾರಿಯಲ್ಲೇ ಇದ್ದ ನಮ್ಮ ಮನೆಗೆ ಕರ್ಯೋಕೆ ಬರ್ತಿದ್ರು, ಸಂಜೆ ನಾವೆಲ್ಲಾ ನಮ್ಮನೆ ಹಿತ್ತಲಲ್ಲಿದ್ದ ನೆಲ್ಲಿಮರದಿಂದ ಕಾಯಿ ಕಿತ್ತು ತಿಂತಾ ಕಲ್ಲಾಟ ಆಡ್ತಿದ್ವಿ. ಹೂಂ... ಅಮ್ಮ ಪ್ರತಿ ನವರಾತ್ರಿ ಎಷ್ಟೊಂದು ಬೊಂಬೆ ಕೂಡಿಸಿರೋ ಗೊತ್ತಾ. ನಮ್ಮ ಬೆಕ್ಕು ಶಾಲಿ ಅದರ ಮೇಲೆ ಹಾರದ ಹಾಗೆ ಕಾಯೋದೇ ನನ್ನ ಕೆಲಸ. ಊರೋರೆಲ್ಲಾ ನೋಡೋಕೆ ಬರೋರು... ಅಪ್ಪ ಬೆಳಗ್ಗೆ ಹೋದ್ರೆ ರಾತ್ರಿ ಬರೋರು. ದಿನವೆಲ್ಲಾ ಅವರಿಗೆ ಮಂಡಿ ಕೆಲಸ."

*****

"ಅಡಿಗೆ ಮಾಡೋಕೆ ಬರ್ತಿದ್ದ ತಾಯಮ್ಮನ ಜೊತೆ ಅವಳ ಮಗಳು ಲೀಲಾ ಬಂದ ದಿನದಿಂದ ಅಪ್ಪ ಬದಲಾಗಿದ್ದರು. ಲೀಲಾ ನನ್ನ ವಯಸ್ಸಿನೋಳೇ.

ನನ್ನ ಕ್ಲಾಸ್ ಮೇಟ್. ಆದರೆ ಹಿಂದಿನ ಬೆಂಚಿನ ಹುಡುಗಿ. ಬಿಳೀ ಅಯ್ಯಂಗಾರ್ ಹುಡುಗಿ. ಬೆಕ್ಕಿನ ಕಣ್ಣು. ಒಂದು ದಿನ ಅವಳೂ ತಾಯಮ್ಮನ ಜೊತೆ ಪುಟ್ಟ ಬ್ಯಾಗಿನೊಂದಿಗೆ ಮನೆಗೆ ಬಂದಿದ್ದಳು. ಅವತ್ತೇ ನಾನು. ಅಮ್ಮ ಮನೆ ಹೊರಗೆ. ಲೀಲಾ ಮನೆ ಒಳಗೆ. ಅಮ್ಮ ಶಾಕ್ ಹೊಡೆದವಳಂತೆ ಸುಮ್ಮನಾಗಿಬಿಟ್ಟಿದ್ದಳು. ಪ್ರತಿ ತಿಂಗಳೂ ಬರ್ತಿದ್ದ ಮನಿ ಆರ್ಡರ್ ಮಾತಿಲ್ಲದೆ ತಗೊಂಡಿದ್ದಳು. ನಾನು, ಅಮ್ಮ ಊರಾಚೆ ಒಂದು ಬಾಡಿಗೆ ಮನೇಲಿ ಇರೋಕೆ ಶುರು ಮಾಡಿದ್ವಿ. ಲೀಲಾ ನಮ್ಮ ಮನೆಗೆ ಬಂದ ದಿನದಿಂದ ಸ್ಕೂಲಿಗೆ ಬರೋದು ನಿಲ್ಲಿಸಿದಳು."

*****

"ಅವತ್ತಿನಿಂದ ನಾನು ಮೂಲೆಮನೆ ರಸ್ತೇಲಿ ಕಾಲಿಡಲಿಲ್ಲ. ಹೆಚ್ಚು ಹೊರಗೂ ಹೋಗಿರಲಿಲ್ಲ. ಊರಲ್ಲೆಲ್ಲೆ ಹೋದ್ರೂ, ಅಪ್ಪ ಕಣ್ಣಿಗೆ ಬಿದ್ದಾರೆಂಬ ಭಯ. ನನಗೆ ನೆನಪಿರುವಂತೆ ಒಂದೇ ಒಂದು ದಿನ ಸಂಜೆ ಹೊತ್ತಿನಲ್ಲಿ ಅಪ್ಪ ನಮ್ಮ ಮನೆಗೆ ಬಂದಿದ್ದರು. ರೂಮಿನಲ್ಲಿ ಬಾಗಿಲು ಹಾಕಿಕೊಂಡು ಅಮ್ಮನೊಡನೆ ಗಂಟೆಗಟ್ಟಲೆ ಮಾತಾಡುತ್ತಿದ್ದರು. ಅವರು ಹೊರಗೆ ಬಂದಾಗ ಅವರ ಮುಖ ಕಪ್ಪಿಟ್ಟಿತ್ತು. ಮೂಲೇಲಿ ನಿಂತಿದ್ದ ನನ್ನ ಜೊತೆ ಮಾತಾಡದೆ ಹೊರಟು ಹೋದರು. ಅವರು ಹೊರಟು ಹೋದ ಮೇಲೂ ರೂಮು ತುಂಬಾ ಅವರು ಜಗಿಯುತ್ತಿದ್ದ ತಂಬಾಕು, ಹಚ್ಚುತ್ತಿದ್ದ ಅತ್ತರಿನ ವಾಸನೆ ಉಳಿದೇ ಇತ್ತು. ಅಪ್ಪ ಏನಂದ್ರೂಂತ ಅಮ್ಮ ನನಗೆ ಹೇಳಲಿಲ್ಲ."

*****

"ನೋಡೇ, ಅಪ್ಪ–ಅಮ್ಮ ಎಂದೂ ಮೊದಲಿನಿಂದ ನಗುನಗ್ತಾ ಮಾತಾಡಿದ್ದು, ಹೊರಗೆ ಹೋಗಿದ್ದು ನಾನು ನೋಡಿರ್ಲೇ ಇಲ್ಲ. ಅಮ್ಮಾನೂ ಎಲ್ಲೂ ಹೋಗ್ತಿರಲಿಲ್ಲ.

ರಾಜಕುಮಾರ್ ಪಿಚ್ಚರ್ ಬಂದಾಗ ಮಾತ್ರ ನನ್ನನ್ನೂ ಎಳಕೊಂಡು ಮ್ಯಾಟಿನಿ ಶೋಗೆ ಹೆಂಗಸರ ಸೀಟಿಗೆ ಹೋಗ್ತಿದ್ಳು. ಅಪ್ಪಂಗೆ ನಾನು ಯಾವ ಕ್ಲಾಸಲ್ಲಿ ಓದ್ತಿದೀನಿ ಅಂತಾನೂ ಗೊತ್ತಿರಲಿಲ್ಲ. ಯಾವಾಗ ಕೇಳಿದ್ರೂ ದುಡ್ಡು ಕೊಡೋರು. ಪುಸ್ತಕಕ್ಕೆ, ಪಿಕ್ ನಿಕ್ ಗೆ, ರಿಬ್ಬನ್ ಗೆ. ನಾನಂದುಕೊಂಡಿದ್ದೆ ಅಪ್ಪಂದಿರು ಇರೋದೇ ಹಾಗೇಂತ."

*****

"ಆದರೆ ಆಮೇಲೆ ನೋಡು. ನಾವು ಊರಾಚೆ ಹೋದ ಮೇಲೆ ನನ್ನ ಫ್ರೆಂಡ್ಸ್ ನಮ್ಮ ಮನೆಗೆ ಬರೋದು ನಿಲ್ಲಿಸಿಬಿಟ್ರು. ನನ್ನ ಜೊತೆ ಹೆಚ್ಚು ಯಾರೂ ಮಾತಾಡ್ತಾನೂ ಇರ್ಲಿಲ್ಲ. ಹೆಂಗಸರು ಎಳ್ಳು ಬೀರೋಕೆ ಮನೆಗೆ ಬರ್ತಿಲಿಲ್ಲ. ಕೊನೆಗೆ ಸ್ಕೂಲಿಗೆ ತಪ್ಪಿಸಿಕೊಂಡಾಗ ಯಾರೂ ಕಾಪಿ ಮಾಡ್ಕೊಳ್ಳೋಕೆ ನೋಟ್ಸ್ ಕೂಡ ಕೊಡ್ತಿರಲಿಲ್ಲ. ನಾನೇನೇ ಮಾಡಿದ್ದೆ...?"

*****

"ಹಾಗೇಂತ ಯಾರೂ ಮೂಲೇ ಮನೆಗೂ ಹೋಗ್ತಿರಲಿಲ್ಲ. ವರ್ಷಗಳು ಕಳೆದಿತ್ತು. ನಾನು ಕಾಲೇಜಿಗೆ ಬಂದಿದ್ದೆ. ಏನೇನೋ ಕಿವಿಗೆ ಬಿತ್ತು. ಲೀಲಾ ಮಹಿಳಾ ಸಮಾಜದ ಮೆಂಬರ್ ಆಗಿದ್ದಾಳಂತೆ. ಲೀಲಾ ಚಂದ್ರಪ್ಪ ಅಂತ ರಾಜಾರೋಷವಾಗಿ ಬರ್ಕೋತಾಳಂತೆ. ಅವಳನ್ನು ಸಮಾಜಕ್ಕೆ ಸೇರಿಸಿಕೊಳ್ಳಬಹುದೋ ಅಲ್ಲೇನೋ ಮೀಟಿಂಗ್ನಲ್ಲಿ ಚರ್ಚೆನೂ ಆಯ್ತಂತೆ. ಮಕ್ಕಳಾಗಿಲ್ಲ ಅಂತ ಲೀಲಾ ಡಾ.ಮಹಾದೇವಿ ಹತ್ತಿರ ಚಿಕಿತ್ಸೆಗೆ ಹೋಗ್ತಿದಾಳಂತೆ. ತಾಯಮ್ಮ ಪ್ರತಿವಾರ ಕಾರಿನಲ್ಲಿ ಸಿನಿಮಾಗೆ ಹೋಗ್ತಾರಂತೆ..."

*****

"ಆಮೇಲೆ ನನ್ನ ಮದುವೆ ಆಯ್ತು. ನನ್ನ ಸೋದರ ಮಾವನ್ನೇ ಕೊಟ್ಟು. ಅಮೆರಿಕಾಗೆ ಬಂದೆ. ಅಮ್ಮನ್ನೂ ಇಲ್ಲೇ ಬಂದಿರು ಅಂದೆ. ಉಹೂಂ, ಬರ್ತೀನಿ. ಹೋಗ್ತೀನಿ. ಆದ್ರೆ ನಮ್ಮ ಜನ, ನಮ್ಮ ನಾಡು ಬಿಟ್ಟು ಬಂದ್ಬಿಡೋಕಾಗಲ್ಲ ಅಂದ್ಲು. ಮದುವೆ ಆದಮೇಲೆ ನಾನು ಊರಿಗೆ ಹೋಗಲೇ ಇಲ್ಲ. ಅಮ್ಮ ಬರ್ತಿತ್ತಾಳೆ. ಈಗ್ಲೂ ಯಾಕೆ ಹೋಗ್ತಿದ್ದಿನೋ ಗೊತ್ತಿಲ್ಲ."

*****

ಜಯಾ ವಿದಾಯ ಹೇಳದೆಯೇ ಎದ್ದು ಹೋದಳು. ಮಾರನೆಯ ದಿನ ಭಾರತಕ್ಕೆ ಹೋದಳು. ತನ್ನೂರಿಗೆ ಹೋದಳು.

ಹದಿನೈದು ದಿನಗಳ ನಂತರ ಮರಳಿ ಬಂದವಳು ಮನೆಗೆ ಬಂದಳು. ಎಷ್ಟೋ ಹೊತ್ತು ಮಾತಿಲ್ಲದೆ ಕುಳಿತಿದ್ದಳು.

"ಏನಾಯ್ತು" ನಾನೇ ಮೊದಲು ಕೇಳಿದೆ.

"ನಾನು ತಲಪೋ ಹೊತ್ತಿಗೆ ಅಪ್ಪನ್ನ ಮಣ್ಣು ಮಾಡಿದ್ದರು. ತಡ ಆಯ್ತಂತೆ.. ಕಾಯೋಕಾಗ್ಲಿಲ್ವಂತೆ...."

"ಓ" ಎಂದೆ. ಏನನ್ನಲೂ ತೋಚದೆ.

"ನನಗೆ ಒಂದು ರೀತಿಯಲ್ಲಿ ಅದೊಂದು ಬಿಡುಗಡೆ ಅನ್ನಿಸಿತು..." ಎಂದಳು.

"ನೋಡೆ ಎಷ್ಟು ವಿಚಿತ್ರ. ಅವಳು ಕಣ್ಣೆದುರಿಗಿಲ್ಲದಾಗ ಲೀಲಾನ ಕಂಡ್ರೆ ಅಷ್ಟು ದ್ವೇಷ ಇತ್ತಲ್ಲಾ. ಅವಳು ಎದುರಿಗೆ ಬಂದಾಗ ಏನೂ ಅನ್ನಿಸ್ಲೇ ಇಲ್ಲ. ಆದ್ರೆ... ನಮ್ಮನೆ ಮೂಲೆಮನೆ. ಹಾಗೇ ಇದೆ. ಅದು ಮಾತ್ರ ನಂದಲ್ಲ ಅನ್ನಿಸ್ಲಿಲ್ಲ...

ಅವಳು ತಲೆ ತಗ್ಗಿಸಿ ಮುಂದುವರಿಸಿದಳು.

"ನೋಡೇ ಲೀಲಾ ಅಂದದ್ದು ಮಾತ್ರ ತುಂಬಾ ಡಿಸ್ಟರ್ಬ್ ಮಾಡ್ತು...."

"ಏನ್ಂದ್ಲು?"

"ಎಷ್ಟು ವರ್ಷ ಕಾದೆ ಜಯಾ. ನೀನು ಬರ್ತಿ. ನಿಮ್ಮಪ್ಪನ ಜತೆ ಜಗಳ ಆಡ್ತೀ, ನನ್ನನ್ನು ಹೊರಗೆ ಹಾಕ್ತಿ ಅಂತ. ನೀನೂ ಬರಲಿಲ್ಲ. ನಿಮ್ಮಮ್ಮನೂ ಬರಲಿಲ್ಲ. ಅದ್ಯಾಕೆ ಹಾಗೆ ಮಾಡಿದೆ... ಎಂದಳು. ನೋಡೇ ನನಗೇನೂ ಈಗ ಅನ್ನಿಸುತ್ತೆ ನಮ್ಮಪ್ಪಾನೂ ನಾನು ಬರ್ತೀನಿ. ಜಗಳ ಆಡ್ತೀನಿಂತ ಕಾಯ್ತಾ ಇರೋ ಏನೋ"!

●

# ಕನ್ನಡ : ವಿಶ್ವ ಕನ್ನಡ



✍ ಡಾ. ಜಿ. ಎನ್. ಉಪಾಧ್ಯ

'ವಸುಧಾ ವಲಯ ವಿಲೀನ ವಿಶದ ವಿಷಯ ವಿಶೇಷಂ' ಎಂಬುದಾಗಿ ಒಂಬತ್ತನೆಯ ಶತಮಾನದಲ್ಲಿ, ಕವಿರಾಜಮಾರ್ಗಕಾರ ಕನ್ನಡನಾಡನ್ನು ಅದರ ಎಲ್ಲ ವೈಶಿಷ್ಟ್ಯಗಳೊಂದಿಗೆ ವಿಶ್ವದಲ್ಲಿ ವ್ಯಾಪಕವಾಗಿ ವಿಲೀನಗೊಳಿಸುವ ಭಾವವನ್ನು ಬಿತ್ತಿದ್ದಾನೆ. 'ಕನ್ನಡವೆನಿಪ್ಪಾ – ನಾಡು ಚೆಲುವಾಯ್ತು' ಎಂಬುದಾಗಿ ಕವಿ ಅಂಡಯ್ಯ ಕೊಂಡಾಡಿದ್ದಾನೆ. 'ಆಗು ನೀ ಅನಿಕೇತನ' ಎಂಬುದು ಕುವೆಂಪು ಎಂಬ ಕವಿ ಚೇತನದ ಕೋರಿಕೆ. ಇವೆಲ್ಲದಕ್ಕೆ ಪೂರಕವಾಗಿ ಇಂದು ಕನ್ನಡವು ಸೀಮಾತೀತವಾಗಿದೆ, ವಿಶ್ವಕನ್ನಡವಾಗಿದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳು ಬರೇ ಗೋಡಂಬಿಯಾಕಾರದ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ ಎನ್ನುವ ವಿಶ್ವಮಾನವತೆಯು ಇಂದು ಜಗದಗಲದ ಬುದ್ಧಿ, ಜೀವ, ಭಾವಗಳನ್ನು ಮುಟ್ಟಿ ಬರುವಲ್ಲಿ ಸಮರ್ಥವಾಗಿದೆ. ವರ್ತಮಾನದ ಸಂದರ್ಭದಲ್ಲಿ ಕನ್ನಡಿಗರು ಜಗತ್ತಿನೆಲ್ಲೆಡೆ ನೆಲೆಸಿ ತಮ್ಮ ಭಾಷೆ ಸಾಹಿತ್ಯ ಸಂಸ್ಕೃತಿಯ ಬಲವರ್ಧನೆಗೆ ಯಥಾಸಾಧ್ಯ ಶ್ರಮಿಸುತ್ತಾ ಬಂದಿರುವುದು ಉಲ್ಲೇಖನೀಯ ಅಂಶ.

'ಕನ್ನಡ' ಎನ್ನುವುದು ಕೇವಲ ಒಂದು ಭಾಷೆಯಷ್ಟೇ ಅಲ್ಲ; ಅದೊಂದು ಸಂಸ್ಕೃತಿ, ಜೀವನ ವಿಧಾನ. ಒಂದು ಭಾಷೆಗೆ ಒಂದು ಸಂಸ್ಕೃತಿಗೆ ಭೌಗೋಳಿಕವಾಗಿ ಸೀಮೆಯನ್ನು, ಎಲ್ಲೆಯನ್ನು ಗುರುತಿಸಬಹುದೇ ಹೊರತು ಸಾಂಸ್ಕೃತಿಕವಾಗಿ ಬೇಲಿ ಹಾಕುವುದು ಸಾಧ್ಯವಾಗಲಾರದು. ಕರ್ನಾಟಕ ಏಕೀಕರಣ ಎಂಬುದು ಆಡಳಿತಾತ್ಮಕ ದೃಷ್ಟಿಯಿಂದ ಮಹತ್ವದ್ದಾದರೂ ಈ ನೆಪದಲ್ಲಿ ಭಾಷೆಗೂ ಗಡಿರೇಖೆಯನ್ನು ಕೊರೆಯುವುದು ಸರ್ವಥಾ ಸರಿಯಲ್ಲ. ಇದು ಅನಿಕೇತನ ಪ್ರಜ್ಞೆಗೆ ವಿಪರೀತವಾದ ವ್ಯವಸ್ಥೆ. ಕರ್ನಾಟಕದಲ್ಲಿ ಕನ್ನಡವೇ ಸತ್ಯ; ಕನ್ನಡವೇ ನಿತ್ಯ. 'ಕನ್ನಡವನ್ನು ಬಿಟ್ಟು ಕರ್ನಾಟಕವನ್ನು ಕಲ್ಪಿಸಿಕೊಳ್ಳಲಾಗದು. ಕನ್ನಡ ಆಡಳಿತದಲ್ಲಿ ವ್ಯವಹಾರದಲ್ಲಿ ಶಿಕ್ಷಣ ಕ್ರಮದಲ್ಲಿ ಮುಖ್ಯ ಮಾಧ್ಯಮವಾಗಬೇಕಾದ ಅವಶ್ಯಕತೆಯು ಇಂದು ಎದ್ದು ಕಾಣುತ್ತದೆ.

ಜಾಗತೀಕರಣದ ಸಂದರ್ಭದಲ್ಲಿ ಇಂದು ಕನ್ನಡವೂ ಬೆಳೆದಿದೆ. ಜಗತ್ತಿನಲ್ಲೆಡೆ ಕನ್ನಡದ ಸೊಲ್ಲು ಅಷ್ಟಿಷ್ಟು ಕೇಳಿಬರುತ್ತಿದೆ. ಕನ್ನಡಕ್ಕೆ ಕೇಂದ್ರ ಸರಕಾರವು ನೀಡಿದ ಅಭಿಜಾತ ಭಾಷೆಯ ಸ್ಥಾನಮಾನ, ಗೌರವವು ಅದರ ಗಡಿ ಮೀರುವ ಯತ್ನಕ್ಕೆ ಗಟ್ಟಿತನವನ್ನು ನೀಡಿದೆ. ಕನ್ನಡದ ಬಳ್ಳಿ ಇಂದು ಜಗದಗಲ ಹಬ್ಬಿ ತನ್ನ ಬೇರುಬಿಳಲು ಬಿಟ್ಟಿದೆ. ಹೀಗಾಗಿ ಹೊರನಾಡ ಕನ್ನಡಿಗರು ಹಾಗೂ ಹೊರರಾಷ್ಟ್ರದ ಕನ್ನಡಿಗರು ಎಂದು ಗುರುತಿಸುವ ಕ್ರಮವೂ ಚಾಲ್ತಿಗೆ ಬಂದಿದೆ. ಕನ್ನಡ ಎಂಬುದು ಮಂತ್ರಕಣಾ, ಶಕ್ತಿ ಕಣಾ, ತಾಯಿ ಕಣಾ, ದೇವಿ ಕಣಾ ಎಂದಿದ್ದಾರೆ ಮಹಾಕವಿ, ರಾಷ್ಟ್ರಕವಿ ಕುವೆಂಪು. ದಕ್ಷಿಣ ಭಾರತದ ಸಂಗೀತ ಪರಂಪರೆಗೆ ಕರ್ನಾಟಕ ಸಂಗೀತವೆಂದೇ ಕರೆಯಲಾಗುತ್ತದೆ. ಕರ್ನಾಟಕ, ಕನ್ನಡ ಎಂಬುದು ಬರಿಯ ಹೆಸರಲ್ಲ; ಅದು ಕನ್ನಡಿಗರ ಉಸಿರು.

ಕರ್ನಾಟಕದಲ್ಲಿ ಸುಮಾರು ಏಳು ಕೋಟಿ ಕನ್ನಡಿಗರು ನೆಲೆಸಿದ್ದರೆ ಹೊರನಾಡು ಹೊರರಾಷ್ಟ್ರಗಳಲ್ಲಿ ಸುಮಾರು ಎರಡು ಕೋಟಿ ಜನರು ಮನೆಮಾಡಿಕೊಂಡಿದ್ದಾರೆ. 'ಎಲ್ಲಾದರೂ ಇರು ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ಕವಿವಾಣಿಯನ್ನು ಹೊರನಾಡ ಕನ್ನಡಿಗರು ಮೈಗೂಡಿಸಿಕೊಂಡಿದ್ದಾರೆ. ಹೀಗಾಗಿ ಭಾರತವಲ್ಲದೆ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ನೆಲೆನಿಂತ ಕನ್ನಡಿಗರು ತಾವಿರುವ ತಾಣಗಳಲ್ಲಿ ಸಂಘಟಿತರಾಗಿ ಕನ್ನಡ ನಾಡು ನುಡಿ ಸಾಹಿತ್ಯ ಸಂಸ್ಕೃತಿಯ ಪುರೋಭಿವೃದ್ಧಿಗೆ ಸದ್ದಿಲ್ಲದೇ ಶ್ರಮಿಸುತ್ತಾ ಬಂದಿದ್ದಾರೆ. ತಾವು ಕನ್ನಡಿಗರಾಗಿ ಉಳಿಯಲು ಬೆಳೆಯಲು ತಮ್ಮದೇ ಆದ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುವುದು ಅವರ ಜೊತೆಗೆ ಕನ್ನಡೇತರರಿಗೆ ಕನ್ನಡತ್ವದ ಪರಿಚಯವನ್ನು ಮಾಡಿಕೊಟ್ಟು ಅವರೊಡನೆ ಸಹಬಾಳ್ವೆ ಮಾಡುವುದನ್ನೂ ಚೆನ್ನಾಗಿ ಕಲಿತುಕೊಂಡಿದ್ದಾರೆ. "ಪರಭಾಷೆ ನಮಗೆ ಏಕೆ ಆಯ್ಯಾ, – ನಮ್ಮ ಭಾಷೆ ನಮಗೆ ಸಾಲದೆ ಎಂದು ಹೊರನಾಡ ಕನ್ನಡಿಗರು ಕನ್ನಡವನ್ನೇ ಹಾಸಿಹೊದ್ದು ನಿದ್ದೆ ಮಾಡುವ ಸ್ಥಿತಿಯಲ್ಲಿರಲಾರರು. ಹಾಗೆಂದು ಪರಭಾಷೆಯನ್ನು ತಲೆದಿಂಬಾಗಿಸಿಕೊಂಡು ಕನ್ನಡವನ್ನು ಕಾಲ್ದೆಸೆಗೆ ತಳ್ಳಿ ಬದುಕಲೂ ಆಗದು. ಕನ್ನಾಡಿನಿಂದ ಹಲವೊಂದು ಕಾರಣಗಳಿಗಾಗಿ ಹೊರದೇಶ ಪ್ರದೇಶಗಳಿಗೆ ವಲಸೆ ಹೋದ ಕನ್ನಡಿಗರು ಕನ್ನಡಿಗರಾಗಿ ಉಳಿಯಲು ಕನ್ನಡ ಭಾಷೆಯೇ ಒಂದು ಪ್ರಮುಖ ಸಾಧನವೆನಿಸುವುದು" ಎಂಬುದಾಗಿ ಬಹುಕಾಲ ಹೊರನಾಡಿನಲ್ಲಿ ಇದ್ದು ಸಾಹಿತ್ಯ ಕೃಷಿಗೈದ ಡಾ. ಬಿ. ಎ. ಸನದಿ ಅವರು ಹೇಳಿರುವ ಮಾತು ನಿಜವೇ ಆಗಿದೆ.

'ಎಲ್ಲೆಲ್ಲಿ ಕನ್ನಡದ ಕಂಪು ಸೂಸಲಲ್ಲಲಿ ಕರಣ ಚಾಚೇವು' ಎಂಬ ಉಮೇದಿನಲ್ಲಿ ಹೊರನಾಡ ಕನ್ನಡಿಗರು ವಿಶ್ವದ ಮೂಲೆ ಮೂಲೆಗಳಲ್ಲಿ ಕನ್ನಡ ಪರ ಚಟುವಟಿಕೆಗಳಲ್ಲಿ ಇವತ್ತು ನಿರತರಾಗಿರುವುದು ಶ್ಲಾಘನೀಯ ಸಂಗತಿ.

ಮುಂಬೈ, ಕಾಸರಗೋಡು, ಸೊಲ್ಲಾಪುರ, ಅಕ್ಕಲಕೋಟ್, ಥಾಣೆ, ಕಲ್ಯಾಣ, ಪನ್ವೇಲ್, ದೆಹಲಿ, ಪುಣೆ, ಜತ್, ಮಿರಜ್, ಅದವಾಣಿ, ಆಲೂರ್, ಮಡಕಶಿರಾ, ಚೆನ್ನೈ, ಕಾಶಿ, ಲಕ್ನೋ, ಮಧುರೈ, ಭೂಪಾಲ, ಪಣಜಿ, ಭಿಲಾಯಿ, ಬರೋಡಾ, ವಾಪಿ, ಗೋವಾ ಮೊದಲಾದ ಕಡೆ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದು, ತಮ್ಮ ಪರಿಸರದಲ್ಲಿ ಕನ್ನಡ ಸಂಸ್ಕೃತಿಯ ಕಂಪನ್ನು ಪಸರಿಸಲು ಅಹರ್ನಿಶಿ ಶ್ರಮಿಸುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಹೊರ ರಾಷ್ಟ್ರಗಳಲ್ಲಿ ಕನ್ನಡಿಗರು ಸಂಘಟಿತರಾಗಿ ಕನ್ನಡಮ್ಮನ ಸೇವೆಯಲ್ಲಿ ನಿರತರಾಗಿರುವುದು ಉಲ್ಲೇಖನೀಯ ಅಂಶ. ಅಮೇರಿಕಾದಲ್ಲಿ 'ಅಕ್ಕ' ಒಕ್ಕೂಟ – ಅತ್ಯಂತ ಯಶಸ್ವಿ ಹಾಗೂ ಸಾರ್ಥಕ ಸಂಘಟನೆಯಾಗಿದ್ದು ಅದು ನಡೆಸಿಕೊಂಡು ಬರುತ್ತಿರುವ ಸಮ್ಮೇಳನಗಳು ನಾಡಿಗೆ ಮಾದರಿಯಾಗಿವೆ. ಸಿಂಗಾಪುರ, ಇಂಗ್ಲೆಂಡ್, ಕೆನಡಾ, ಜರ್ಮನಿ, ದುಬೈ, ಬಹರಿನ್, ಅಬುದಾಬಿ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಅಮೇರಿಕಾದ ವಿವಿಧ ರಾಷ್ಟ್ರಗಳಲ್ಲಿ ಕನ್ನಡಿಗರ ಕ್ರಿಯಾಶೀಲತೆಗೆ ಯಾರೂ ಬೆರಗಾಗಬೇಕು. ಸದಭಿರುಚಿಯ ಕನ್ನಡ ಸಾಹಿತ್ಯವನ್ನು ಈ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಓದುತ್ತಿದ್ದಾರೆ ಎಂಬುದು ಸಮಾಧಾನದ ಸಂಗತಿ. ಹೊರರಾಷ್ಟ್ರದಲ್ಲಿರುವ ಐಟಿ, ಬಿಟಿ, ಉದ್ಯಮಿಗಳೂ ಕನ್ನಡ ಸಾಹಿತ್ಯ ಸಂಸ್ಕೃತಿಯ ಏಳಿಗೆಗೆ ಹೆಗಲುಕೊಟ್ಟಿರುವುದು ಹೊಸ ಬೆಳವಣಿಗೆಯೇ ಆಗಿದೆ. ಈ ಮೂಲಕ ಕನ್ನಡ ಸಂಸ್ಕೃತಿ ಕರ್ನಾಟಕಕ್ಕಷ್ಟೇ ಸೀಮಿತವಾಗದೆ ಅದು ವಿಶ್ವವ್ಯಾಪಿಯಾಗುವಂತೆ ಮಾಡಿದ ಶ್ರೇಯಸ್ಸು ಹೊರನಾಡ, ಹೊರರಾಷ್ಟ್ರದ ಕನ್ನಡಿಗರಿಗೆ ಸಲ್ಲುತ್ತದೆ.

ಚಿಣ್ಣರಬಿಂಬದ ಕನ್ನಡ ಕ್ರಾಂತಿ; ಕನ್ನಡದ ಕಹಳೆ ಇಂದು ಜಾಗತಿಕ ಮಟ್ಟದಲ್ಲಿ ಕೇಳಿ ಬರುತ್ತಿದ್ದರೂ ಕನ್ನಡವು ಶಿಕ್ಷಣರಂಗದಲ್ಲಿ ಮುರಟುತ್ತಿದೆ. ಹೊಸ ತಲೆಮಾರು ಕನ್ನಡದಿಂದ ದೂರವಾಗುತ್ತಿರುವುದು ವಾಸ್ತವ. ಇದಕ್ಕೆ ಪರ್ಯಾಯ ಕ್ರಮಗಳನ್ನು ರೂಪಿಸಿಕೊಳ್ಳಲು ಸಾಧ್ಯ ಎಂಬುದನ್ನು ಮುಂಬೈನ ಹಿರಿಯ ಪೊಲೀಸ್ ಅಧಿಕಾರಿ, ಕನ್ನಡಿಗ ಪ್ರಕಾಶ್ ಭಂಡಾರಿ ಅವರು ಸಾಧಿಸಿ ತೋರಿಸಿದ್ದಾರೆ. ಬೆಂಗಳೂರನ್ನು ಬಿಟ್ಟರೆ ಅತಿ ಹೆಚ್ಚು ಕನ್ನಡಿಗರಿರುವ ಮುಂಬೈ ಮಹಾನಗರ, ಉಪನಗರಗಳಲ್ಲಿ ಏಳು ಸಾವಿರಕ್ಕೂ ಅಧಿಕ ಮಕ್ಕಳಿಗೆ ಕಳೆದ ಅನೇಕ ವರ್ಷಗಳಿಂದ ಕನ್ನಡ ಕಲಿಸುವ, ಕನ್ನಡ ಸಂಸ್ಕೃತಿಯನ್ನು ಪರಿಚಯಿಸುವ ಬೃಹತ್ ಚಳುವಳಿಯನ್ನು ಆರಂಭಿಸಿ ಯಶಸ್ವಿಯಾಗಿದ್ದಾರೆ. ಚಿಣ್ಣರಬಿಂಬ ದೂರದ ಮುಂಬೈಯಲ್ಲಿ ಒಂದು ಮುಕ್ತ ವಿಶ್ವವಿದ್ಯಾಲಯದಂತೆ ಕಾರ್ಯನಿರ್ವಹಿಸುತ್ತಿದೆ. ಒಂದು ಅಕಾಡೆಮಿ, ಸರಕಾರ ಮಾಡಬಹುದಾದ ಘನಕಾರ್ಯವನ್ನು ನಿವೃತ್ತ ಪೊಲೀಸ್ ಪ್ರಕಾಶ್ ಭಂಡಾರಿ ಅವರು ಮಾಡಿ ತೋರಿಸಿದ್ದಾರೆ. ಇದರಿಂದ ಮುಂಬೈ ಕನ್ನಡದ ಭದ್ರಕೋಟೆಯಾಗಿದೆ.

ಕರ್ನಾಟಕ ಏಕೀಕರಣಗೊಂಡು ಎಪ್ಪತ್ತು ವರ್ಷಗಳೇ ಸಂದು ಹೋದರೂ ಕರ್ನಾಟಕದಲ್ಲಿಯೇ ಕನ್ನಡ ಭಾಷೆಗೆ ದೊರೆಯಬೇಕಾಗಿದ್ದ ಗೌರವ, ಸ್ಥಾನಮಾನಗಳು ದೊರೆಯುತ್ತಿಲ್ಲ ಎಂಬ ಬೇಸರ ಎಲ್ಲೆಡೆ ದಟ್ಟವಾಗಿರುವಾಗ ಗಡಿ ಮೀರಿ ಹೊರನಾಡ ಕನ್ನಡಿಗರು ಕನ್ನಡ ಸಂಸ್ಕೃತಿಯ ಬಣ್ಣ ಬನಿಯನ್ನು ಗಾಢಗೊಳಿಸಲು ಶ್ರಮಿಸುತ್ತಿರುವುದು ಉಲ್ಲೇಖನೀಯ ಸಂಗತಿ. ಹೀಗಾಗಿ ಕರ್ನಾಟಕ ರಾಜ್ಯವೆಂದ ತಕ್ಷಣ ಬರೇ ಅಂದೊಂದು ಭೂ ಪ್ರದೇಶವೆಂದು ಭಾವಿಸುವುದಲ್ಲ. ಅದೊಂದು ಮನೋ ಸಾಮ್ರಾಜ್ಯವಾಗಿ ಗುರುತಿಸುವಂತಾಗಬೇಕು. ರಾಜ್ಯವೆನ್ನುವುದು ಅನೇಕ ಭೌತಿಕ ಅಭೌತಿಕ ಸಂಸ್ಕೃತಿಗಳ ಬೆಸುಗೆಯಾಗಿದೆ ಎಂಬುದನ್ನು ಯಾರೂ ಮರೆಯುವಂತಿಲ್ಲ. ನಾವಿಂದು ವಿಶಾಲವಾದ ನೆಲೆಯಲ್ಲಿ ಬೃಹತ್ಕರ್ನಾಟಕ–ಸಾಂಸ್ಕೃತಿಕ ಕರ್ನಾಟಕವನ್ನು ಕಲ್ಪಿಸಿಕೊಳ್ಳಬೇಕಾಗಿದೆ. ಅದನ್ನು ಕಟ್ಟಲು ಬಟ್ಟೆ ಬಯಲಾಗಬೇಕಿದೆ; ಬೆಟ್ಟ, ಕಾನಾಗಬೇಕಿದೆ. ಅದಕ್ಕಾಗಿ ಹೆಣಗಬೇಕಾಗಿದೆ.

“ನಾವು ಕನ್ನಡಿಗರು; ಒಂದು ಭವ್ಯ ಹಾಗೂ ಶ್ರೀಮಂತ ಸಂಸ್ಕೃತಿಯ ಪರಂಪರೆಯ ವಾರಸುದಾರರು” ಎಂಬ ಮಾತನ್ನು ಮರೆಯದೆ ತಮ್ಮಲ್ಲ ಕಷ್ಟ ನಷ್ಟಗಳನ್ನು ಬದಿಗೊತ್ತಿ ‘ನೀ ಮೆಟ್ಟುವ ನೆಲ ಅದೇ ಕರ್ನಾಟಕ’ ಎಂಬ ಘನ ಹಂಬಲದಲ್ಲಿ ಬದುಕನ್ನು ನಡೆಸುತ್ತಿರುವ ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಸಾಧನೆಗಳ ಸರಿಯಾದ ಪರಿಚಯ ಒಳನಾಡ ಕನ್ನಡಿಗರಿಗೇ ಇಲ್ಲ ಎಂಬುದು ವಿಷಾದದ ಸಂಗತಿ. ಕನ್ನಡ ನಾಡಿನ ಉಜ್ವಲ ಭವಿಷ್ಯಕ್ಕಾಗಿ ಹೊರನಾಡ ಕನ್ನಡಿಗರು ಯಥಾಸಾಧ್ಯ ಶ್ರಮಿಸುತ್ತಾ ಬಂದಿರುವುದು ಅವಲೋಕನೀಯವಾಗಿದೆ. ಕನ್ನಡಕ್ಕೆ ಇಂದು ಬೇಕಾಗಿರುವುದು ಆಳುವ ಸಂಸ್ಕೃತಿಯಲ್ಲ. ಬದಲಾಗಿ ಕನ್ನಡವನ್ನು ಊಳುವ, ಬಿತ್ತುವ ಬೆಳೆಯುವ ಸಂಸ್ಕೃತಿಯು ಮನ್ನಣೆ ಪಡೆಯಬೇಕಾಗಿದೆ. ಆಗಲೇ ಕನ್ನಡ ಹೃದಯದಲ್ಲಿ ನಿತ್ಯೋತ್ಸವವಾಗುವುದು.

ಕೃಪೆ: ವಸುಧಾ ವಲಯ (ಕಸ್ತೂರಿ ಅಂಕಣ ಮಾಲಿಕೆ)




# The Maharaja of Mysore's contribution to Belgium University

The Maharaja of Mysore (historically associated via social and cultural memory with international relief efforts for war-ravaged European institutions) contributed funds toward the global reconstruction of the historic KU Leuven University Library in Belgium after its catastrophic destruction during the World Wars.



### Key Context & Details.

The Disaster: The iconic library of the Catholic University of Leuven was deliberately burned and decimated by German troops in 1914 during World War I, and later suffered severe destruction again in May 1940 during World War II.

Global Fundraising: An international rebuilding campaign drew donations from worldwide monarchs, leaders, and public subscriptions to restore the university's repository of knowledge.







The Maharaja's Role: The ruler of the Princely State of Mysore joined international donors by contributing financial support to help rebuild the devastated academic symbol.

He was Maharaja Nalvadi Krishnaraja Wodeyar.

He was the most progressive, highly intellectual, spiritual, pro-people king who was generous to the extent of mortgaging his own properties for the benefit of his subjects.The people of Karnataka should be proud of and grateful to such kings forever.




Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel.: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077